# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



With Your support we reach
100000
HAMPI TIMES E-PAPER VIEWS
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com
Thank You





ಸಂಪುಟ:01 • ಸಂಚಿಕೆ:154 • ನೋಂದಣಿ ನಂ.:KARKAN27911 • ವಿಜಯನಗರ • 11.11.2023 • ಶನಿವಾರ • ಪುಟ:04 • ಬೆಲೆ:2
Volume:01 • Issue:154 • Reg.No:KARKAN27911 • VIJAYANAGARA • 11.11.2023 • Saturday • Page:04 • Rs:2






ಹೋಲ್ ಸೇಲ್
ಧರದಲ್ಲಿ ವಾಣಿಜ್ಯ ಮತ್ತು ಗೃಹ ಬಳಕೆ ವಸ್ತುಗಳ ಮಾರಾಟ
ಮದುವೆ, ಹೋಟೆಲ್, ಗಿಫ್ಟ್, ಶುಭ ಸಮಾರಂಭ, ಪೂಜೆ, ಗೃಹ ಬಳಕೆ , ಅಡುಗೆ ವಿವಿಧ ಸಲಕರಣೆಗಳಿಗಾಗಿ ಭೇಟಿ ನೀಡಿ.
ಶ್ರೀ ರಾಜಲಕ್ಷ್ಮೀ ಏಜೆನ್ಸೀಸ್
Sri Rajalakshmi
ಬಾಲಾ ಟಾಕೀಸ್ ಹತ್ತಿರ, ಶ್ರೀ ಬನ್ನಿ ಮಹಂಕಾಳಿ ಗುಡಿ ಪಕ್ಕದಲ್ಲಿ
ಹಂಪಿ ರಸ್ತೆ, ಹೊಸಪೇಟೆ
9242418650, 9986123989


ಮೈಕ್ರೋ ನ್ಯೂಸ್

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

# ಜ್ಞಾನದೇಗುಲಕ್ಕೂ ಕಲ್ಲೆಸೆದ ಅಜ್ಞಾನಿಗಳು

## ಕುಡುಕರ, ಪಡ್ಡೆ ಹುಡುಗರ ಹಾವಳಿ ತಡೆಗೆ ಬೇಕಿದೆ ಕ್ರಮ। ಕಾಲೇಜ್ ಸುವ್ಯವಸ್ಥೆಗೆ ಎಸ್ಡಿಎಂಸಿ ಅಧ್ಯಕ್ಷರು ಹಾಗೂ ಶಾಸಕರು ಗಮನ ಹರಿಸಲಿ ಎಂದ ಸಾರ್ವಜನಿಕರು

■ ಬಂದಾತರ ಪ್ರಕಾಶ್
**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ್ ನೂತನ ಸಭಾ ಭವನದ ಪ್ಲಾಟ್ ಫಾರ್ಮ್ ಟೈಲ್ಸ್ ಹಾಗೂ ಗ್ಲಾಸ್‌ಗಳು ಪಡ್ಡೆ ಹುಡುಗರ ಹಾಗೂ ಮದ್ಯವೆಸನಿಗಳ ಹಾವಳಿಗೆ ನುಚ್ಚು ನೂರಾಗಿವೆ, ಕಾಲೇಜ್ ಕೊಠಡಿಗಳಿಗೆ ಅಳವಡಿಸಿದ ವಿದ್ಯುತ್ ವೈರುಗಳು ಖದೀಮರಿಂದ ನಾಪತ್ತೆ.ಯಾಗಿವೆ.

ಈ ಸರ್ಕಾರಿ ಕಾಲೇಜ್ ಮೈದಾನದಲ್ಲಿ ಲೈಟ್ (ವಿದ್ಯುತ್ ದೀಪ) ವ್ಯವಸ್ಥೆ ಇಲ್ಲದ ಕಾರಣ, ಮೈದಾನ ಕತ್ತಲಾಗುತ್ತಿದ್ದಂತೆ, ಮದ್ಯವೆಸನಿಗಳಿಂದ ಬಾರ್ ಅಂಡ್ ರೆಸ್ಟೋರೆಂಟ್ ಆಗಿ ಮಾರ್ಪಡುತ್ತೆ, ಮದ್ಯವೆಸನಿಗಳ ತಾಣ ಮಾತ್ರವಲ್ಲದೆ, ಅನೈತಿಕ ಚಟುವಟಿಕೆಗಳ ಮತ್ತು ಕಳ್ಳ ಕಾಕರ ತಂಗುದಾಣ ಇದಾಗಿದೆ.

ಹಾಳದ ಕಾಲೇಜ್ ಕಿಟಕಿಗಳನ್ನು ಅವಲೋಕಿಸಿದ ಕಾಲೇಜ್ ಅಭಿವೃದ್ಧಿ ಮಂಡಳಿ ಸದಸ್ಯರು ಡಿಸ್ ಮಂಜುನಾಥ, ಎಂ.ಪ್ರಕಾಶ್, ನಾಗಾರಾಜ್, ಸರ್ಕಾರದಿಂದ ರಾತ್ರಿ ಕಾವಲುಗಾರ ಸಿಬ್ಬಂದಿ ನೇಮಕವಿಲ್ಲ. ಮತ್ತು ಹಾವಳಿ ನಿಯಂತ್ರಣಕ್ಕೆ ಹಲವು ಬಾರಿ ಪತ್ರಿಕೆಗಳಲ್ಲಿ ವರದಿಯಾದರೂ, ಆರಕ್ಷಕ ಸಿಬ್ಬಂದಿ ಇದುವರೆಗೂ ಎಚ್ಚೆತ್ತಿಲ್ಲ.





ಇದನ್ನರಿತ ಮದ್ಯವ್ಯಸನಿಗಳು ಮತ್ತು ಅನೈತಿಕ ಚಟುವಟಿಕೆದಾರರು ಹಾಗೂ ಕಳ್ಳಕಾಕರು ಈ ಸ್ಥಳ ಬಳಸಿ, ಜ್ಞಾನದೇಗುಲಕ್ಕೆ ಕಳಂಕ ತರುತ್ತಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಕಾಲೇಜ್ ಕೊಠಡಿಗಳಿಗೆ, ಹೊರಭಾಗದಲ್ಲಿ ಅಳವಡಿಸಿದ ವಿದ್ಯುತ್ ವೈರ್ ಮತ್ತು ಲ್ಯಾಪ್ ಟಾಪ್ ಹಾಗೂ ಸಿಸಿ ಕ್ಯಾಮರ್ ವೈರ್ ಗಳನ್ನು ಕಳ್ಳರು ಕಟ್ ಮಾಡಿ ಕದ್ದೊಯ್ದಿದ್ದಾರೆ. ಈ ಪ್ರಕರಣ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕಾಲೇಜ್ ಪ್ರಾಚಾರ್ಯರು ದೂರು ದಾಖಲಿಸಿದ್ದಾರೆ.

ಸರ್ಕಾರದ ಉಚಿತ ಭಾಗ್ಯಗಳಿಂದ, ಪ್ರಸ್ತುತ ಯಾವುದೇ ಅಭಿವೃದ್ಧಿಗೆ ಅನುದಾನ ದೊರೆಯುವುದು ಕಷ್ಟ , ಆದರೆ ಕಾಲೇಜ್ ಎಸ್ಡಿಎಂಸಿ ಅಧ್ಯಕ್ಷರು ಹಾಗೂ ಹಾಲಿ ಶಾಸಕರು ಕೆ.ನೇಮಿರಾಜ್ ನಾಯ್ಕ್ ಅವರು, ಸರ್ಕಾರಿ ಕಾಲೇಜ್ ಪೀಠೋಪಕರಣ ಹಾಗೂ ಮೈದಾನದ ಸುವ್ಯವಸ್ಥಿತೆ ಕಾಪಾಡುಲು, ಸಂಬಂಧಿಸಿದವರಿಗೆ ಸೂಚಿಸಬೇಕು ಹಾಗೆ ಈ ಮೈದಾನದಲ್ಲಿ ಪ.ಪಂ ವತಿಯಿಂದ ಹೈ ಮಾಸ್ಕ್ ವಿದ್ಯುತ್ ದೀಪಗಳನ್ನು ಅಳವಡಿಸಲು ಸೂಚಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



> ಈ ಸರ್ಕಾರಿ ಕಾಲೇಜಿಗೆ ಸುತ್ತುಗೋಡೆ ಇಲ್ಲ ಮತ್ತು ಕಾಲೇಜಿಗೆ ರಾತ್ರಿ ಕಾವಲುಗಾರರು ಕೂಡಾ ನೇಮಕ ಇಲ್ಲ, ಅಲ್ಲದೆ ವಿದ್ಯುತ್ ದೀಪಗಳಿಲ್ಲದೆ ರಾತ್ರಿ ಮೈದಾನ ಕತ್ತಲಾಗಿರುತ್ತೆ. ಇತ್ತೀಚೆಗೆ ಕಾಲೇಜ್‌ನ ವೈರ್ ಗಳನ್ನು ಕಟ್ ಮಾಡಿ ಕದ್ದಿರುವರು. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇವೆ.
>
> । ಜಿ.ಸೋಮಶೇಖರ್.
> ಪ್ರಾಚಾರ್ಯರು, ಸ.ಪ.ಪೂ.ಕಾಲೇಜ್, ಕೊಟ್ಟೂರು.

> ಪಟ್ಟಣದ ಹೃದಯ ಭಾಗದಲ್ಲಿರುವ ಈ ಮೈದಾನ ಪ್ರಸ್ತುತ ತಾಲೂಕು ಮಟ್ಟದ ಸರ್ಕಾರಿ ಕ್ರೀಡಾಂಗಣ, ವಾಯು ವಿಹಾರಗಳು ರಾತ್ರಿ ವೇಳೆ ಓಡಾಡುವುದಕ್ಕೆ ಹಾಗೂ ಕ್ರೀಡಾ ಪಟುಗಳ ಆಟಕ್ಕೆ,ತೊಂದರೆ ಆಗದಂತೆ ಮೈದಾನದ ಸುವ್ಯವಸ್ಥಿಗೆ, ಪೊಲೀಸ್ ಸಿಬ್ಬಂದಿ ಗಸ್ತು, ಗೆ ಸೂಚನೆ ಹಾಗೂ ವಿದ್ಯುತ್ ದೀಪ ಅಳವಡಿಸುವ ಬಗ್ಗೆ ಕಾಲೇಜ್ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಶಾಸಕರು ಕೆ.ನೇಮಿರಾಜ್ ನಾಯ್ ಅವರು ಗಮನಿಕರಿಸಲಿ.
>
> । ಶಿವಮೂರ್ತಿ, ಸ್ಥಳೀಯರು ಕೊಟ್ಟೂರು.

## ಷಟ್‌ಸ್ಥಳ ಸಿದ್ಧಾಂತ ಪಾಲನೆಯಿಂದ ಜೀವನ ಸುಖಮಯ

**ಹಂಪಿ ಟೈಮ್ಸ್ ಹೊಸಪೇಟೆ:**



ಜೀವನದಲ್ಲಿ ಲಿಂಗಾಯತ ಪರಂಪರೆಯ ಷಟ್‌ಸ್ಥಳಗಳನ್ನು ಅಳವಡಿಸಿಕೊಂಡು ಪಾಲನೆ ಮಾಡಿದವರು ಮಹಾತ್ಮರಾಗಿದ್ದಾರೆ. ಲಿಂಗಪೂಜೆ ಮಾಡುವವರೆಲ್ಲರೂ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ಎಂಬ ಷಟ್‌ಸ್ಥಳ ಸಿದ್ಧಾಂತದ ಮೂಲಗಳನ್ನು ಅರಿತು ಪಾಲನೆ ಮಾಡಿದರೆ ಜೀವನ ಸುಖಮಯವಾಗಿರುತ್ತದೆ ಎಂದು ಶ್ರೀ ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದ ಲಿಂಗೈಕ್ಯ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸವಿನೆನಹಿನಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳಿಗೆ ಆರಂಭಕ್ಕೂ ಮುನ್ನ ಷಟ್‌ಸ್ಥಳ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಶುಕ್ರವಾರ ಮಾತನಾಡಿದರು.

ಲಿಂಗಪೂಜೆ ಮತ್ತು ಶರಣ ಪಂಪರೆಯಲ್ಲಿ ಷಟ್‌ಸ್ಥಳ ಧ್ವಜಾರೋಹಣಕ್ಕೆ ಅದರದ್ದೇ ಆದ ವಿಶೇಷ ಮಹತ್ವವಿದೆ. ಷಟ್ ಸ್ಥಳ ಸಿದ್ಧಾಂತಗಳನ್ನು ಅಳವಡಿಸಿಕೊಂಡವರು ಮಹತ್ತರ ಸಾಧನೆ ಮಾಡಿ ಶರಣರೆನಿಸಿಕೊಂಡವರಿದ್ದಾರೆ. ಉನ್ನತ ವಿಚಾರ ಶಕ್ತಿ, ಸದ್ಗುಣಗಳ, ದಿವ್ಯಶಕ್ತಿಯನ್ನು ಆಚರಣೆಯಿಂದ ಪಡೆಯಲು ಸಾಧ್ಯವಿದೆ ಎಂದರು.

## ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 2023-24ನೇ ಸಾಲಿನ ಮಹಿಳಾ ತರಬೇತಿ ಯೋಜನೆಯಡಿ ಮಹಿಳೆಯರಿಗೆ ವಿವಿಧ ತರಬೇತಿಗಳನ್ನು ನೀಡಲು ಮಾನ್ಯತೆ ಪಡೆದ ಅರ್ಹ ತರಬೇತಿ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ (kaushalkar.com ವೆಬ್‌ಸೈಟ್‌ನಲ್ಲಿ) ನೋಂದಣಿಯಾಗಿರುವ, ತರಬೇತಿ ಕೇಂದ್ರ ಹಾಗೂ ಜಾಬ್ ರೋಲ್‌ಗಳಿಗೆ ಮಾನ್ಯತೆ ಪಡೆದ ವಿವಿಧ ತರಬೇತಿ ಸಂಸ್ಥೆಯಲ್ಲಿ ಮಹಿಳೆಯರಿಗೆ ವಿವಿಧ ತರಬೇತಿಗಳನ್ನು ನೀಡಲಾಗುತ್ತದೆ. ಆದ್ದರಿಂದ ತರಬೇತಿ ನೀಡಲು ಮಾರ್ಗಸೂಚಿಗೆ ಅನುಸಾರವಾಗಿ ಆಸಕ್ತ ಸಂಸ್ಥೆಗಳು ತಮ್ಮಲ್ಲಿರುವ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳ ಕುರಿತು ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ನವೆಂಬರ್ 20 ಕೊನೆಯ ದಿನಾಂಕವಾಗಿದ್ದು, ಅರ್ಜಿಯನ್ನು ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1ನೇ ಮಹಡಿ, ಜಿಲ್ಲಾಡಳಿತ ಭವನ, ಕೊಪ್ಪಳ ಇಲ್ಲಿಗೆ ಸಲ್ಲಿಸಬೇಕು ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ.ಸಂಗನಬಸವ ಸ್ವಾಮೀಜಿ ಪಟ್ಟಾಧಿಕಾರದ ಸುವರ್ಣ ಸಂಭ್ರಮ
# ಸಂಸ್ಥಾನಮಠ-ರಾಜಮನೆತನಗಳ ವಿಚಾರಗೋಷ್ಠಿ
### ಶ್ರೀಮಠದ ಜ.ಬಸವಲಿಂಗ ಮಹಾಸ್ವಾಮೀಜಿ ಹೇಳಿಕೆ। ನಾಲ್ಕು ದಿನ ಕಾರ್ಯಕ್ರಮ




■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಲಿಂಗೈಕ್ಯ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸವಿನೆನಹಿನಲ್ಲಿ ನೂತನ ಶಿಲಾ ಮಂಟಪ ಉದ್ಘಾಟನೆ, ಶ್ರೀ ಪ್ರೌಢದೇವರಾಯ ವಸತಿಯುತ ಪ್ರಸಾದ ನಿಲಯ, ಶ್ರೀ ಕಪ್ಪಿನ ಚೆನ್ನಬಸವೇಶ್ವರ ಅತಿಥಿಗೃಹ ಉದ್ಘಾಟನೆ ಹಗೂ ಬಸವದರ್ಶನ ಪ್ರವಚನ ಮಂಗಲೋತ್ಸವ, ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಮಠದ ಜಗದ್ಗುರು ಬಸವಲಿಂಗ ಮಹಾಸ್ವಾಮೀಜಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಗರದ ಶ್ರೀ ಜಗದ್ಗುರು ಕೊಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ನ.20 ರಿಂದ 23 ರ ವರೆಗೆ ಕಾರ್ಯಕ್ರಮಗಳು ಜರುಗಲಿವೆ. ನ.20 ರಂದು ಸಂಜೆ 7 ಗಂಟೆಗೆ ಜದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ ಮತ್ತು ರಾಜಮನೆತನಗಳು ಕುರಿತು ವಿಚಾರಗೋಷ್ಠಿ ಆಯೋಜಿಸಿದೆ. ಕುದರೆಮೋತಿ ಮೈಸೂರಮಠದ ಜಗದ್ಗುರು ವಿಜಯಮಹಾಂತ ಸ್ವಾಮೀಜಿ ಸಾನ್ನಿಧ್ಯ, ಚಿತ್ತರಗಿ- ಇಲಕಲ್ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ಹಂದಿಗುಂದ ವಿರಕ್ತಮಠದ ಶಿವಾನಂದ ಸ್ವಾಮಿಜಿ ನೇತೃತ್ವ ಹಾಗೂ ಘಟಪ್ರಭಾ ಗುಬ್ಬಲಗುಡ್ಡ ಕೆಂಪಯ್ಯಸ್ವಾಮಿಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಬಳಿಕ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಂದ ಶ್ರೀ ಜಗದ್ಗುರು ಕೊಟ್ಟೂರಸ್ವಾಮಿ ಗುರುಪರಂಪರೆ ಮತ್ತು ಹಂಡೆ ಅರಸು ಮನೆತನ ಕುರಿತು ಗ್ರಂಥ ಲೋಕಾರ್ಪಣೆ ಮಾಡುವರು.

ನ.21 ರಂದು ಸಂಜೆ 7 ಗಂಟೆಗೆ ವಿಜಯನಗರ ಜಿಲ್ಲೆಯ ಸಂಪನ್ಮೂಲ ಹಾಗೂ ಅಭಿವೃದ್ಧಿ ಕುರಿತ ವಿಚಾರಗೋಷ್ಠಿಯಲ್ಲಿ ಉಜ್ಜೈನಿ ಸದ್ಧರ್ಮಪೀಠದ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಶಿರಹಟ್ಟಿ ಭಾವೈಕ್ಯತಾ ಸಂಸ್ಥಾನಮಠದ ಜಗದ್ಗುರು ಫಕೀರ ಸಿದ್ಧರಾಮ ಸ್ವಾಮೀಜಿ, ಶ್ರೀಶೈಲ ಪೀಠದ ಜಗದ್ಗುರು ಡಾ.ಚೆನ್ನಸಿದ್ಧರಾಮ ಪಂಡಿತಾರಾಧ್ಯ ಶಿಚವಾಚಾರ್ಯ ಭಗವತ್ಪಾದರು ಹಾಗೂ ಶಿರಹಟ್ಟಿ ಭಾವೈಕ್ಯತಾ ಸಂಸ್ಥಾನ ಮಠದ ಜಗದ್ಗುರು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಪಾವನ ಸಾನ್ನಿಧ್ಯ ವಹಿಸುವರು.

ನ.22 ರಂದು, ಅಭಿನವ ಮೃತ್ಯುಂಜಯ ಸ್ವಾಮೀಜಿಯಿಂದ ಆರಂಭಗೊಂಡಿರುವ 'ಬಸವದರ್ಶನ' ಪ್ರವಚನ ಮಂಗಲವಾಗಲಿದೆ. ಮುಂಡರಗಿಯ ಜಗದ್ಗುರು ನಾಡೋಜಾ ಡಾ.ಅನ್ನದಾನೀಶ್ವರ ಶಿವಯೋಗಿಗಳ ಸನ್ನಿಧ್ಯವಹಿಸಲಿದ್ದು, ಧಾರವಾಡದ ಮುರುಘಾಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಹಾವೇಯ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಬೆಳಗವಿಯ ನಾಗನೂರು ರುದ್ರಾಕ್ಷಿ ಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ ನೇತೃತ್ವ ವಹಿಸುವರು.

ಇದೇ ವೇಳೆ 'ವಿಜಯ ಕಲ್ಯಾಣ'(ತೃತೀಯ ಮುದ್ರಣ) ಗ್ರಂಥ ಲೋಕಾರ್ಪಣೆಗೊಳ್ಳಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಸಂಸದ ವೈ.ದೇವೇಂದ್ರಪ್ಪ ಸೇರಿದಂತೆ ವಿವಿಧ ಕ್ಷೇತ್ರಗಳ ಶಾಸಕರು ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ತಿಳಿಸಿದರು.

ನ.23 ರಂದು ಬೆಳಗ್ಗೆ 11 ಗಂಟೆಗೆ ವಳಬಳ್ಳಾರಿ ಪೂಜ್ಯರಿಂದ ನೂತನ ಶಿಲಾಮಠದ ಉದ್ಘಾಟನೆ, ಶ್ರೀ ಕಪ್ಪಿನ ಚನ್ನಬಸವೇಶ್ವರ >>2

# ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ನೇಮಕ

■ **ಹಂಪಿ ಟೈಮ್ಸ್ ಹೊಸಪೇಟೆ**



ಬಿಎಸ್ ಯಡಿಯೂರಪ್ಪ ಅವರ ಪುತ್ರ, ಶಿಕಾರಿಪುರ ಕ್ಷೇತ್ರದ ಶಾಸಕ ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕವಾಗಿದ್ದಾರೆ.

ಕೂಡಲೇ ಜಾರಿಗೆ ಬರುವಂತೆ ಬಿ.ವೈ. ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿಯ ನೂತನ ಸಾರಥಿಯನ್ನಾಗಿ ನೇಮಿಸಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ. ಪಿ. ನಡ್ಡಾ ನೇಮಿಸಿದ್ದಾರೆ. ಈ ಕುರಿತು ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಚ್ಛತೆಯಲ್ಲೂ ನಗರಸಭೆ ನಿರ್ಲಕ್ಷ್ಯ
## ಹೊಸ ಅಮರಾವತಿ ಪ್ರದೇಶದಲ್ಲಿ ಕಸದ ರಾಸಿಗಿಲ್ಲ ಮುಕ್ತಿ



■ **ಹಂಪಿ ಟೈಮ್ಸ್ ಹೊಸಪೇಟೆ:**

ಹೊಸಪೇಟೆ ಅಮರಾವತಿ ಸುರಭಿ ಕಲ್ಯಾಣ ಮಂಟಪದ ರಸ್ತೆ ಬದಿಯಲ್ಲೆ ಜನರು ಕಸ ತಂದು ಸುರಿಯುತ್ತಿದ್ದಾರೆ. ಕಸದ ರಾಶಿ ಕಣ್ಣಿಗೆ ರಾಚುವಂತೆ ಬಿದ್ದಿದ್ದರೂ ನಗರಸಭೆ ತ್ಯಾಜ್ಯವಿಲೇವಾರಿ ಸಿಬ್ಬಂದಿ ತೆರವುಗೊಳಿಸಲು ಮೀನಾಮೇಷ ಮಾಡುತ್ತಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ನಗರಸಭೆಯ ವಾರ್ಡ್‌ಗಳ ಗಡಿಭಾಗದಲ್ಲಿನ ಜನರ ಕಷ್ಟ ಕೇಳೋರಿಲ್ಲದಂತಾಗಿದೆ. ನಗರಸಭೆ ಪರಿಸರ ವಿಭಾಗದ ಇಂಜಿನೀಯರ್ ಸೇರಿದಂತೆ ಗಮನಹರಿಸಬೇಕಾದ ಸಿಬ್ಬಂದಿ ಎಲ್ಲಿದ್ದಾರೆ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ. ಈಗಾಗಲೇ ಅನೇಕ ಬಾರಿ ನಗರಸಭೆ ಪೌರಾಯುಕ್ತರಿಗೆ ಮನವಿ ಮಾಡಿದರೂ ಪ್ರಯೋಜನವಿಲ್ಲದಂತಾಗಿದೆ. ಮಕ್ಕಳು ಅನಾರೋಗ್ಯಕ್ಕೀಡಾದರೆ ಯಾರು ಹೊಣೆ ಎಂದು ನಿವಾಸಿಗಳು ಪ್ರಶ್ನಿಸುತ್ತಿದ್ದು, ಅಧಿಕಾರಿಗಳೇ ಉತ್ತರಿಸಬೇಕಿದೆ.

## ನ.17 ರಂದು ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2023-24ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ನವೆಂಬರ್ 17 ರಂದು ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಕಾರ್ಯಕ್ರಮದೊಂದಿಗೆ ಕೊಪ್ಪಳ ಜಿಲ್ಲಾ ವಿವಿಧೋದ್ದೇಶ ಒಳಾಂಗಣ ಕ್ರೀಡಾಂಗಣದಲ್ಲಿ ಸಂಘಟಿಸಲಾಗುತ್ತಿದೆ.

15 ರಿಂದ 29 ವರ್ಷ ವಯೋಮಾನದೊಳಗಿನ ಯುವ ಕಲಾವಿದರಿಗೆ ತಮ್ಮಲ್ಲಿರುವ ಕಲಾ ಪ್ರತಿಭೆಯನ್ನು ಪ್ರದರ್ಶಿಸಲು ಜಿಲ್ಲಾ ಯುವಜನೋತ್ಸವ ಅತ್ಯುತ್ತಮ ವೇದಿಕೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರು ನೇರವಾಗಿ ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಹಾಗೂ ರಾಜ್ಯ ಮಟ್ಟದಲ್ಲಿ ವಿಜೇತರು ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.

ಸ್ಪರ್ಧೆಗಳ ವಿವರ:

ಕನ್ನಡ/ಆಂಗ್ಲ/ಹಿಂದಿ ಭಾಷೆಯಲ್ಲಿ ಜನಪದ ನೃತ್ಯ (ತಂಡ), ಜನಪದ ಗೀತೆ (ತಂಡ), ಜನಪದ ನೃತ್ಯ (ವೈಯಕ್ತಿಕ), ಜನಪದ ಗೀತೆ (ವೈಯಕ್ತಿಕ), ಕಥೆ ಬರವಣಿಗೆ(ವೈಯಕ್ತಿಕ)(1000 ಪದಗಳಿಗೆ ಮೀರಬಾರದು. ಕನ್ನಡ, ಆಂಗ್ಲ ಅಥವಾ ಹಿಂದಿ ಭಾಷೆಯಲ್ಲಿರಬೇಕು. ವಿಷಯವು ಆಕ್ರಮಣಕಾರಿಯಾಗಿರಬಾರದು. ಈಗಾಗಲೇ ಪ್ರಕಟವಾಗಿರಬಾರದು. ಸ್ಪಷ್ಟವಾಗಿರಬೇಕು, ಜಾತಿ, ಪಂಥ, ಧರ್ಮ, ವರ್ಣ, ಜನಾಂಗವನ್ನು ಹಾಗೂ ಸೂಕ್ತವಲ್ಲದ ವಿಷಯ ಒಳಗೊಂಡಿರಬಾರದು.) ಪೋಸ್ಟರ್ ಮೇಕಿಂಗ್(ಭಿತ್ತಿ ಪತ್ರ ತಯಾರಿಕೆ)(ವೈಯಕ್ತಿಕ) ಪೋಸ್ಟರ್ ಎ3(11.7" ಥ 16.5") ಕನ್ನಡ/ಆಂಗ್ಲ/ಹಿಂದಿ ಭಾಷೆಯಲ್ಲಿರಬೇಕು. ಭಿತ್ತಿ ಪತ್ರವು ಯಾವುದೇ ಸಂಸ್ಥೆಯನ್ನು ಅಥವಾ ಬ್ರಾಂಡ್ ಹೆಸರನ್ನು ಪ್ರತಿನಿಧಿಸುತ್ತಿರಬಾರದು. ಸ್ಪರ್ಧಿಗಳು ಸಲ್ಲಿಸುವ ಭಿತ್ತಿ ಪತ್ರವು 20-30 ಪದಗಳೊಳಗೆ ಇರುವ ಶೀರ್ಷಿಕೆ ಒಳಗೊಂಡಿರಬೇಕು.

ಘೋಷಣೆ: ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಇರಬೇಕು. (ರಾಷ್ಟ್ರ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು) ಕನ್ನಡ ಭಾಷೆಯನ್ನು ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದವರೆಗೆ ಮಾತ್ರ ಸೀಮಿತಗೊಳಿಸಿದೆ. ಸ್ಪರ್ಧಿಗಳು ಸಿದ್ದಪಡಿಸಿಕೊಂಡಿರುವ ಆಯ್ದ ವಿಷಯಗಳ ಬಗ್ಗೆ ಭಾಷಣ ಮಾಡಬೇಕು. (ತೀರ್ಮಾನವು ಭಾಷಣದ ನಿಖರತೆ, ಹರಿವು, ವಿಷಯಕ್ಕೆ ಸಂಬಂಧಿಸಿದಂತೆ ಮಂಡಿಸುವ ಅಂಕಗಳು, ಶಬ್ದ/ಪದಗಳು ಪುನರಾವರ್ತನೆ ಆಗದಿರುವುದು. ವಿಷಯದ ಬಗ್ಗೆ ಅರಿವು ಮತ್ತು ಆತ್ಮ ವಿಶ್ವಾಸ ಹೊಂದಿರುವುದರ ಮೇಲೆ ಅವಲಂಬಿಸಿರುತ್ತದೆ.)

ಛಾಯಾಚಿತ್ರಣ(ವೈಯಕ್ತಿಕ) 2 (ಎಲೆಕ್ಟ್ರಾನಿಕ್ ಮೋಡ್) ಸ್ಪರ್ಧೆಯಲ್ಲಿ ಪ್ರಗತಿಶೀಲ ಭಾರತ, ಆತ್ಮ ನಿರ್ಭರ ಭಾರತ, ಯೋಗ/ ಕ್ರೀಡೆ, ಫಿಟ್ನೆಸ್‌ಗಾಗಿ ದೈಹಿಕ ಚಟುವಟಿಕೆ, ಪ್ರಕೃತಿ ದೃಶ್ಯಗಳು ಇವುಗಳಲ್ಲಿ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು. ಮೊಬೈಲ್‌ನಲ್ಲಿ ತೆಗೆದ ಚಿತ್ರಗಳನ್ನು ಸಹ ಪರಿಗಣಿಸಲಾಗುವುದು. ಛಾಯಾಚಿತ್ರವು 20-30 ಪದಗಳೊಳಗೆ ಇರುವ ಶೀರ್ಷಿಕೆ ಒಳಗೊಂಡಿರಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.ನಂ.: 8197398600 ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಸ್ಥಾನಮಠ ವಿಚಾರ ಗೋಷ್ಠಿ

ಮೊದಲ ಪುಟದಿಂದ

ಅತಿಥಿಗೃಹವನ್ನು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ, ಶ್ರೀ ಪ್ರೌಢದೇವರಾಯ ವಸತಿಯುತ ಪ್ರಸಾದ ನಿಲಯವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆ ಗೊಳಿಸುವರು. ಇದೇ ವೇಳೆ ಜಗದ್ಗುರು ಡಾ.ಸಂಗನಬಸವ ಶಿವಯೋಗಿಗಳ ಪಂಚಲೋಹದ ಮೂರ್ತಿ ಪ್ರತಿಷ್ಠಾಪಿಸಲಾಗುವುದು. ಅದರೊಂದಿಗೆ ಹೇಮಕೂಟ ಸಿಂಹಾಸನಾಧೀಶ ಶ್ರೀ ಜಗದ್ಗುರು ಡಾ.ಸಂಗನಬಸವ ಶಿವಯೋಗಿ ಗ್ರಂಥವನ್ನು ಕ್ರೀಡಾ ಸಚಿವ ಬಿ.ನಾಗೇಂದ್ರ, ಹಂಪೆ ಹೇಮಕೂಟ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಗುರುಪಂಪರೆ ಗ್ರಂಥವನ್ನು ಶಾಸಕ ವಿನಯ ಕುಲಕರ್ಣಿ ಬಿಡುಗಡೆ ಮಾಡುವರು ಎಂದು ವಿವರಿಸಿದರು.

ಶಾಖಾಮಠದ ಶ್ರೀಗಳು, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಎಚ್.ವಿ.ಶರಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೆ. ರವಿಶಂಕರ, ಪ್ರಮುಖರಾದ ಕೋರಿಶೆಟ್ಟಿ ಲಿಂಗಪ್ಪ, ಸಾಲಿ ಸಿದ್ಧಯ್ಯ ಸ್ವಾಮಿ, ಕೆ.ಗಂಗಾಧರಪ್ಪ, ಬಿ.ಎಂ.ಸೋಮಶೇಖರ, ಎಲ್.ಬಸವರಾಜ, ಗೌಳೇರ ರುದ್ರಪ್ಪ ಸುದ್ದಿಗೋಷ್ಠಿಯಲ್ಲಿ ಇದ್ದರು.

# ಸ್ವ ಪ್ರೇರಣೆ-ಯಶಸ್ಸಿನ ರಾಜಮಾರ್ಗ

ಬೆಸಿಗೆ ರಜೆಗಾಗಿ ಅಣ್ಣನ ಮಗ ಶಿವಪ್ರಕಾಶ ಮನೆಗೆ ಬಂದಿದ್ದ. ಕಾಲೇಜಿನಲ್ಲಿ ಓದುತ್ತಿರುವ ಅವನನ್ನು ಮುಂದೆ ವೃತ್ತಿ ಬದುಕಿನಲ್ಲಿ ಏನಾಗಬೇಕೆಂದಿರುವೆ? ಎಂದು ಪ್ರಶ್ನಿಸಿದಾಗ, 'ಪೈಲಟ್ ಆಗಬೇಕೆಂದಿರುವೆ' ಎಂದನು. ನೀನು ಆ ಗುರಿ ತಲುಪಲು ಯಾವ ರೀತಿ ಯೋಜನೆ ಹಾಕಿಕೊಂಡಿರುವೆ? ಎಂಬ ನನ್ನ ಸವಾಲಿಗೆ 'ಐ.ಐ.ಟಿಯಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ಓದಲು ಸಿದ್ಧತೆ ನಡೆಸಿದ್ದೇನೆ' ಎಂದು ಆತ್ಮವಿಶ್ವಾಸದಿಂದ ಹೇಳಿದಾಗ, ಈಗಿನ ಮಕ್ಕಳು ಎಷ್ಟೊಂದು ಸಿದ್ಧತೆಯಲ್ಲಿ ಮುನ್ನುಗ್ಗುತ್ತಿರುವರಲ್ಲ ಎಂದು ಅಚ್ಚರಿಯಾಯಿತು.

ಏನು ಆಗ ಬೇಕು? ಎಂಬುದು ಪ್ರೇರಣೆ ಯಾದರೆ, ಹೇಗೆ ಆಗಬೇಕು? ಎಂಬುದು ಶಿಕ್ಷಣ ಮತ್ತು ತರಬೇತಿಯಿಂದ ದೊರಕುತ್ತದೆ. ಆಂಗ್ಲಭಾಷೆಯಲ್ಲಿ 'ಮೋಟಿವೇಷನ್' ಎಂದು ಪ್ರೇರಣೆಗೆ ಕರೆಯುತ್ತೇವೆ. ಅದರ ಅರ್ಥವನ್ನು ಕೆದಕಿದರೆ ಕಾರಣ, ಯಾಕಾಗಿ, ಉದ್ದೇಶ, ಪ್ರೇರಣೆ, ಆಸಕ್ತಿ. . . . . ಮುಂತಾದ ಪದಗಳು ದೊರಕುತ್ತವೆ. ಈ ಎಲ್ಲ ಅಂಶಗಳೂ ಪ್ರೇರಣೆಗೆ ಮೂಲಭೂತ ಅಗತ್ಯವಾಗಿವೆ.

ಸಾಮಾನ್ಯ ಅರ್ಥದಲ್ಲಿ ಪ್ರೇರಣೆ ಎಂದರೆ ಗುರಿ ತಲುಪಲು ಮಾಡುವ ಧನಾತ್ಮಕ ಕಾರ್ಯ ಎನ್ನಬಹುದು. ಗುರಿಯು ನಾನಾ ವಿದಾನಗಳ ಮುಖಾಂತರ ಅವರ ಆಸಕ್ತಿಗನುಗುಣವಾಗಿರುತ್ತದೆ. ಅಂದರೆ ಕೆಲವರಿಗೆ ಹಣ ಗಳಿಸಲು, ಕೆಲವರಿಗೆ ಹೆಸರು ಮಾಡಲು, ಸಾಧನೆ ಮಾಡಲು. . .ಈ ರೀತಿ ಅವುಗಳನ್ನು ಹೇಳಬಹುದು. ಆದರೆ ಇವುಗಳನ್ನು ಸಾಧಿಸಲು ಪ್ರೇರಣೆ ಅಗತ್ಯವಾಗಿ ಬೇಕಾಗುತ್ತದೆ. ಈ ಪ್ರೇರಣೆಯಲ್ಲಿ ಬಾಹ್ಯ ಪ್ರೇರಣೆ ಮತ್ತು ಸ್ವ ಪ್ರೇರಣೆ ಎಂದು ವಿಭಾಗ ಮಾಡಬಹುದು. ಬಾಹ್ಯ ಪ್ರೇರಣೆಯು ಪೋಷಕರು, ಶಿಕ್ಷಕರು, ಗೆಳೆಯರು. . .ಮುಂತಾದವರಿಂದ ದೊರೆಯುತ್ತದೆ. ಯಾವುದೇ ಪ್ರೇರಣೆ ಕ್ರಿಯಾಶೀಲವಾಗಬೇಕಾದರೆ ಅದಕ್ಕೆ ಪೂರಕವಾಗಿ ಮಾನಸಿಕ ಸ್ಥಿತಿ ಸಿದ್ಧವಾಗಿರಬೇಕು. ಅದರ ಜೊತೆಗೆ ಸಮರ್ಪಕವಾದ ಪರಿಸರ/ಸನ್ನಿವೇಶ ರೂಪಗೊಂಡಿರಬೇಕು.

### ಕನಸು ನನಸಾಗುವತ್ತ. . . .

ಕಂಡ ಕನಸುಗಳು ನನಸಾಗಬೇಕಾದರೆ ನಿರ್ಧಿಷ್ಟವಾದ ಗುರಿಯನ್ನು ಖಚಿತಪಡಿಸಿಕೊಂಡಿರಬೇಕು. ಕಷ್ಟ, ಸವಾಲು, ನಿರುತ್ಸಾಹಗಳು ಕೆಲಸಾರಿ ಗೊಂದಲ ಸೃಷ್ಟಿಸಬಹುದು. ಅವು ನಮ್ಮ ಬೆಳವಣಿಗೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುತ್ತವೆ. ಅದಕ್ಕೆ ಜಗ್ಗದೆ ದೃಢಮನಸ್ಕರಾಗಿ ತಾಳ್ಮೆಯಿಂದ ಅವುಗಳನ್ನು ಮೆಟ್ಟಿನಿಲ್ಲಬೇಕು. ಅದಕ್ಕೆ ಯಾವ ರೀತಿ ಬೇರೆ ಬೇರೆ ವಿಧಾನಗಳಿಂದ ಪ್ರಯತ್ನವನ್ನು ಮುಂದುವರೆಸುತ್ತೀರಿ ಎಂಬುದು ಹೆಚ್ಚು ಮಹತ್ವ ಪಡೆಯುತ್ತದೆ. ವಿದ್ಯಾರ್ಥಿಗಳನ್ನು ಸಾಮಾನ್ಯವಾಗಿ ಹಿನ್ನಡೆ ಅಥವಾ ನಿರುತ್ಸಾಹ ಗೊಳಿಸುವ ಅಂಶಗಳೆಂದರೆ, ಪರೀಕ್ಷೆಯ ಫಲಿತಾಂಶಗಳು, ಉನ್ನತ ವ್ಯಾಸಂಗಕ್ಕೆ ಸೇರಿದಾಗ, ಹಣಕಾಸಿನ ಮುಗ್ಗಟ್ಟು, ವೈಯಕ್ತಿಕ ಆಘಾತಗಳು ಇತ್ಯಾದಿಗಳು. ಇವುಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಇವುಗಳಲ್ಲಿ ಹೆಚ್ಚಿನವು ತಾತ್ಕಾಲಿಕ ತೊಂದರೆ ಕೊಡುತ್ತವೆ. ಅದಕ್ಕೆ ಹೆದರದೆ ಮುನ್ನುಗ್ಗುವ ಛಲ ಅಗತ್ಯವಾಗಿಬೇಕಾಗುತ್ತದೆ.

### ಸ್ವ ಪ್ರೇರಣೆ . . .. . .

ಪ್ರೇರಣೆಯು ವರ್ತನೆ ಮತ್ತು ಕಾರ್ಯವನ್ನು ಬದಲಾಯಿಸುತ್ತ ಯಶಸ್ಸಿನತ್ತ ಸಾಗಲು ಪ್ರೋತ್ಸಾಯಿಸುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಬಾಹ್ಯ ಪ್ರೇರಣೆ ಮೇಲೆ ಹೆಚ್ಚು ಅವಲಂಬಿತವಾಗದೇ, ಸ್ವ ಪ್ರೇರಣೆ ಮೇಲೆ ನಿಲ್ಲುವಂತಾಗಬೇಕು. ಅದು ಕಠಿಣ ಹಾದಿಯಾದರೂ, ಹೆಚ್ಚು ಕಾಲ ಜೊತೆಗೆ ನಿಂತು, ಬೆಳವಣಿಗೆಗೆ ನೀರೆರೆದು ಬೆಂಬಲಿಸುತ್ತದೆ. ಈ ಹಿನ್ನಲೆಯಲ್ಲಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ವ ಪ್ರೇರಣೆ ಹೆಚ್ಚು ಅಗತ್ಯವಾಗುತ್ತ ಪರಿಣಾಮಕಾರಿಯಾಗಿ ಕಾಣುತ್ತದೆ.







**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com


### ಸ್ವ ಪ್ರೇರಣೆಗೆ ದಾರಿ ಮಾಡಿಕೊಡುವ ಅಂಶಗಳು

ಪ್ರಭಲ ಆಕಾಂಕ್ಷೆ: ವೃತ್ತಿ ಬದುಕಿಗೆ ಸರಿಯಾದ ದಾರಿಯನ್ನು ಆಯ್ಕೆ ಮಾಡಿಕೊಂಡು, ಆ ನಿಟ್ಟಿನಲ್ಲಿ ಪ್ರಭಲ ಆಕಾಂಕ್ಷೆ ಇದ್ದರೆ ಯಶಸ್ಸು ಕೈಗೆ ನಿಲುಕುತ್ತದೆ. ಉದಾಹರಣೆಗೆ ಪರೀಕ್ಷೆಯಲ್ಲಿ ನನಗೆ ಇಷ್ಟೇ ಶೇಕಡ ಅಂಕಗಳು ಬರಬೇಕು ಎಂದು ತೀರ್ಮಾನಿಸಿಕೊಳ್ಳಿ. ಅದು ಎಸ್.ಎಸ್.ಎಲ್.ಸಿ, ಪಿ.ಯು.ಸಿ. ಪದವಿ. ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿರಬಹುದು. ಅದಕ್ಕೆ ಗುರಿ ನಿಶ್ಚಲವಾಗಿರಬೇಕು. ಅದಕ್ಕೆ ಸರಿಯಾದ ಮಾರ್ಗದಲ್ಲಿ ಮುನ್ನೆಡೆವ ರೂಪರೇಷಗಳನ್ನು ಸಿದ್ದಪಡಿಸಿಕೊಂಡು ಆ ನಿಟ್ಟಿನಲ್ಲಿ ಮುನ್ನಡೆಯಬೇಕು. ಇಂತಹ ಆಕಾಂಕ್ಷೆ ಇದ್ದರೆ ಅರ್ಧ ಯಸಸ್ಸುಗಳಿಸಿದಂತೆ ಎಂಬುದನ್ನು ಮರೆಯಬಾರದು.

ಸವಾಲುಗಳನ್ನು ಸ್ವೀಕರಿಸಿ: ಯಶಸ್ಸಿಗೆ ಕಾರಣವಾಗುವ ಅಂಶಗಳಲ್ಲಿ ಸಾವಲುಗಳು ಪ್ರಮುಖವಾದವು. ಅದಕ್ಕಾಗಿ ಸವಾಲುಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು. ಅವು ಅನಿರೀಕ್ಷಿತವಾಗಿ ನಿಮ್ಮ ಮೂಲಭೂತ ಯೋಜನೆಗೆ ನೆರವಾಗುವಂತಿರುತ್ತವೆ. ಅವುಗಳಿಂದ ಗುರಿಸಾಧನೆಗೆ ಹೆಚ್ಚು ನೆರವಾಗುತ್ತವೆ. ಹಾಗಾಗಿ ಸವಾಲುಗಳಿಗೆ ಬೆನ್ನು ಮಾಡಬಾರದು.



ಧನಾತ್ಮಕ ಮನೋಭಾವ: ನಿಮ್ಮ ಮನೋಧೋರಣೆಯ ಮೇಲೆ ಸಾಧ್ಯ-ಅಸಾಧ್ಯಗಳು ಅವಲಂಬಿತವಾಗಿರುತ್ತವೆ. ನಕಾರಾತ್ಮಕತೆಯು ನಿಮ್ಮನ್ನು ಹಿಂದಕ್ಕೆ ಎಳೆಯುತ್ತಿರುತ್ತದೆ. ಹಾಗಾಗಿ ನಿಮ್ಮದು ಸದಾ ಧನಾತ್ಮಕ ಮನೋಧೋರಣೆಯಾಗಿರಲಿ. ಇದರಿಂದ ಮುನುಗ್ಗಲು ಬೆಂಬಲ ಸಿಗುತ್ತದೆ.

ಪರಿಹಾರಗಳನ್ನು ಕಂಡುಕೊಳ್ಳಿ: ಯಶಸ್ಸಿನತ್ತ ದೃಢವಾಗಿ ಸಾಗಿದಲ್ಲಿ ನಿಮ್ಮನ್ನು ತಡೆಯುವವರಾರು?. ಎದುರಾಗುವ ಕಷ್ಟ-ಕಾರ್ಪಣ್ಯಗಳನ್ನು ಮತ್ತು ಮಾನಸಿಕ ಸ್ಥರತೆಗಳು ಸೃಜನಾತ್ಮಕತೆಯತ್ತ ತೊಡಗಿಸುತ್ತವೆ. ಅದರಿಂದ ವಿನೂತನ ಪರಿಹಾರಗಳನ್ನು ಕಂಡುಕೊಳ್ಳಬಹುದು. ಆ ನಿಟ್ಟಿನತ್ತ ನಿಮ್ಮನ್ನು ನೀವು ತೊಡಗಿಸಿಕೊಳ್ಳುವುದು ಅವಶ್ಯಕ.

**ಪರಿಸರ:** ಪ್ರಭಾವ ಬೀರುವ ಧನಾತ್ಮಕ ಅಂಶಗಳು ನಿಮ್ಮ ಪರಿಸರದಲ್ಲಿವೆಯೇ ಎಂಬುದನ್ನು ಯೋಚಿಸಿ. ಅದು ಸ್ನೇಹಿತರ ವಲಯ ಅಥವಾ ಕುಟುಂಬದಲ್ಲಿ ಇರಬಹುದು. ಆತ್ಮೀಯರು ಮತ್ತು ಉತ್ತಮ ಗೆಳೆಯರು ನಿಮ್ಮಲ್ಲಿನ ಹೊಸತನಗಳನ್ನು ಗುರುತಿಸಿ ಬೆಂಬಲಿಸುತ್ತಾರೆ. ಹಾಗಾಗಿ ಒಳ್ಳೆಯವರ ಸಹವಾಸವೂ ಇಲ್ಲಿ ಹೆಚ್ಚು ಪ್ರಾಶಸ್ತ್ಯ ಪಡೆಯುತ್ತದೆ. ನಿಮ್ಮ ಸಮಸ್ಯೆಗಳನ್ನು ಪೋಷಕರು ಮತ್ತು ಶಿಕ್ಷಕರ ಜೊತೆ ಮುಕ್ತವಾಗಿ ಹಂಚಿಕೊಳ್ಳಬೇಕು. ಜೊತೆಗೆ ಮನರಂಜನೆ ಸಮಯದಲ್ಲಿ ಅದರಲ್ಲೂ ಜ್ಞಾನ ಸಿಗುವ ಪುಸ್ತಕ, ಚಲನಚಿತ್ರ, ದೂರದರ್ಶನ ಕಾರ್ಯಕ್ರಮಗಳತ್ತ ಹೆಚ್ಚು ವಾಲುವುದು ಉತ್ತಮ.

ನಿಮ್ಮನ್ನು ನೀವು ಪ್ರಶಂಸಿಸಿಕೊಳ್ಳಿ: ಒಂದು ಹಂತದ ಗೆಲುವನ್ನು ಪಡೆದಾಗ ನಿಮ್ಮನ್ನು ನೀವು ಪ್ರಶಂಸಿಸಿಕೊಳ್ಳಬೇಕು. ಇದು ಸ್ವ ಪ್ರೇರಣೆಗೆ ಒಳ್ಳೆಯ ಮಾರ್ಗವಾಗಿದೆ. ಒಂದು ಹಂತ ತಲುಪಿದಾಗ ಅಂದರೆ ಅದು ಸೋಲಿರಲಿ-ಗೆಲುವಿರಲಿ ಆಗ ಸ್ವಲ್ಪ ವಿಶ್ರಾಂತಿ ಪಡೆಯಬೇಕು. ಆ ಸಮಯದಲ್ಲಿ ನೀವು ನಡೆದ ಹಾದಿಯನ್ನು ಅವಲೋಕಿಸಬೇಕು. ಅದರಿಂದ ನಿಮಗೆ ಮುಂದಿನ ಹಾದಿಗೆ ಹೆಚ್ಚು ಬೆಳಕು ಸಿಗುತ್ತದೆ. ಅದು ಯಸಸ್ಸಿನ ಒಂದು ಭಾಗವೆಂದರೆ ತಪ್ಪಲ್ಲ.

ಯಶೋಗಾಥೆಗಳಿಂದ ಸ್ಫೂರ್ತಿಪಡೆಯಿರಿ: ಜೀವನದಲ್ಲಿ ಯಶಸ್ಸನ್ನು ಸಾಧಿಸಿದ ಮಹಾತ್ಮಗಾಂಧಿ, ಎಡಿಸನ್, ಅಬ್ದುಲ್ ಕಲಾಂ. . . . . ರಂತವರ ಹಾದಿಯನ್ನು ಓದಿ ಮತ್ತು ಅರ್ಥಮಾಡಿಕೊಳ್ಳಿ. ಆ ಕಥೆಗಳ ಹಿಂದೆ 'ಸೋಲೆ ಗೆಲುವಿನ ಸೋಪಾನ' ಎಂಬ ತತ್ವವು ಇದ್ದೇ ಇರುತ್ತದೆ. ಅಂದರೆ ಅವರೆಲ್ಲರು ಸಂಕಟ, ತೊಂದರೆ, ಕಷ್ಟಗಳ ಸರಮಾಲೆಯನ್ನೆಲ್ಲಾ ಧೈರ್ಯದಿಂದ ಎದುರಿಸಿ ಮೇಲೆ ಬಂದಿರುತ್ತಾರೆ. ಚೀನಾದಲ್ಲಿ ಸಂಕಷ್ಟ ಎಂದರೆ ಒಂದು ಅರ್ಥದಲ್ಲಿ ಸವಾಲು ಎಂದಾದರೆ, ಮತ್ತೊಂದು ಅರ್ಥದಲ್ಲಿ ಅವಕಾಶ ಎಂದಿದೆ. ಇದು ನಮಗೂ ಅನ್ವಯಿಸುತ್ತದೆ.

### ಮುಗಿಸುವ ಮುನ್ನ:

ಪ್ರತಿಯೊಬ್ಬರೂ ಕನಸು ಕಾಣುತ್ತಾರೆ. ಆದರೆ ಬಹುತೇಕರು ಆ ಕನಸಿನ ಲೋಕದಲ್ಲೇ ವಿಹರಿಸುತ್ತಿರುತ್ತಾರೆ. ಆ ಕನಸನ್ನು ನನಸು ಮಾಡಬೇಕೆಂದರೆ ಕಠಿಣ ಶ್ರಮ ಮತ್ತು ನಮ್ಮಲ್ಲಿರುವ ಬದ್ಧತೆಗಳಿಂದ ಮಾತ್ರ ಸಾಧ್ಯ. ಪ್ರಭಲವಾದ ಪ್ರೇರಣೆಯು ಸಾಮಾನ್ಯ ಮನುಷ್ಯರನ್ನು ಮತ್ತು ಸಾಧಕರನ್ನು ಬೇರ್ಪಡಿಸುತ್ತದೆ. ಇದಕ್ಕೆ ಒಂದು ಕಡೆ ಸ್ವಾಮಿ ವಿವೇಕಾನಂದರು "ನಾವು ಏನು ಆಗಿದ್ದೇವೆ ಅದಕ್ಕೆ ನಾವೇ ಕಾರಣ. ನಮ್ಮಲ್ಲಿ ಬದಲಾವಣೆ ಯಾಗಬೇಕಾದರೂ ಅದಕ್ಕೆ ನಾವೇ ಕಾರಣ. ನಮ್ಮನ್ನು ನಾವು ಬದಲಾಯಿಸಿಕೊಳ್ಳಲು ಮತ್ತು ಮಾರ್ಪಡಿಸಿಕೊಳ್ಳಲು ನಮ್ಮಲ್ಲಿರುವ ಶಕ್ತಿಯೇ ಕಾರಣ" ಎಂಬ ಮಾತುಗಳು ಸ್ವ ಪ್ರೇರಣೆಯನ್ನು ಪ್ರಭಲವಾಗಿ ಪ್ರತಿಪಾದಿಸುತ್ತವೆ. ಹಾಗಾಗಿ ನಿಮ್ಮಲ್ಲಿರುವ ಸ್ವ ಪ್ರೇರಣೆಯಯನ್ನು ಜಾಗೃತಗೊಳಿಸಿಕೊಳ್ಳಿ. ಯಶಸ್ಸನ್ನು ನಿಮ್ಮದಾಗಿಸಿಕೊಳ್ಳಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ದೀಪಾವಳಿ ಸಡಗರದಲ್ಲಿ ಕಣ್ಣಿನ ಕಾಳಜಿ ಮರೆಯದಿರಿ





"ಪಂಚೇಂದ್ರಿಯಂ ನಯನಂ ಪ್ರಧಾನಂ" ಪಂಚೇಂದ್ರಿಯಗಳಲ್ಲಿ ಕಣ್ಣುಗಳೇ ಪ್ರಧಾನವಾಗಿರುವಂತೆ ಕಣ್ಣುಗಳ ರಕ್ಷಣೆಯು ಅಷ್ಟೇ ಪ್ರಾಮುಖ್ಯ.

ದೃಷ್ಟಿಯಂತೆ ಸೃಷ್ಟಿ, ಸೃಷ್ಟಿಯಾಗಿ ಸುಂದರ ಸೊಬಗನ್ನು ಕಾಣಲು ದೇವರು ದಯಪಾಲಿಸಿದ ಕಣ್ಣುಗಳ ಕಾಪಾಡಿಕೊಳ್ಳುವುದು ಅತ್ಯವಶ್ಯ. ದೀಪಾವಳಿ ಹಬ್ಬ ದೀಪಗಳ, ಸಿಹಿ ತಿನಿಸುಗಳ ಹಾಗು ಪಟಾಕಿಗಳ ಸಂಭ್ರಮ ಸಡಗರದ ಹಬ್ಬ ಈ ಸಂದರ್ಭದಲ್ಲಿ ಪಟಾಕಿಯಿಂದ ಆಗುವ ಕಣ್ಣಿನ ತೊಂದರೆಗಳು ಹಾಗು ಅದರ ಬಗ್ಗೆ ಜಾಗೃತಿ ವಹಿಸೋಣ. ಅಂಶಗಳ ಪ್ರಕಾರ ದೊಡ್ಡವರಿಗಿಂತ ಮಕ್ಕಳಲ್ಲಿ ಪಟಾಕಿಯಿಂದ ಶೇ.70 ಪ್ರತಿಶತ ಗಾಯಗಳಾಗುತ್ತವೆ ಅದರಲ್ಲಿಯೂ ಸಹ ಪಟಾಕಿ ಹಚ್ಚುವವರಿಗಿಂತ ಪಕ್ಕದಲ್ಲಿ ನೋಡುವವರಲ್ಲಿ ಶೇ.60 ತೊಂದರೆಗಳು ಹೆಚ್ಚು.

### ಪಟಾಕಿ ಹಚ್ಚುವಾಗ ಅನುಸರಿಸಬೇಕಾದ ಅಂಶಗಳು

- ಮನೆಯ ಒಳಗಡೆ ಯಾವುದೇ ಪಟ್ಟಾಕಿಗಳನ್ನು ಹಚ್ಚಬಾರದು
- ಹೊರಗಡೆ ವಿಶಾಲವಾದ ಜಾಗದಲ್ಲಿ ಹಚ್ಚಬೇಕು. ಜನಸಂದಣಿ ಇಲ್ಲದ ಗುಡಿಸಲು ಬಣವಿ ಗೋಧಾಮಗಳು ಇಲ್ಲದ ಜಾಗದಲ್ಲಿ ಹಚ್ಚಬೇಕು.
- ಮಕ್ಕಳು ಪಟಾಕಿ ಹಚ್ಚುವಾಗ ಪಾಲಕರು ಗಮನಿಸಿ ತಕ್ಕದ್ದು
- ಕೈಯಲ್ಲಿ ಹಿಡಿದು ಪಟಾಕಿಗಳನ್ನು ಹಚ್ಚುವುದಾಗಲಿ, ಎಸೆಯುದಾಗಲಿ ಮಾಡಬಾರದು
- ಪಟಾಕಿ ಮೇಲೆ ಕಾಲಿ ಡಬ್ಬಗಳನ್ನು (ಪ್ಲಾಸ್ಟಿಕ್/ಗಾಜಿನ ಬಾಟಲಿಗಳು/ತಗಡು) ಇಟ್ಟು ಹಚ್ಚಬಾರದು
- ಉದ್ದವಾದ ಅಗರಬತ್ತಿಯನ್ನು ಉಪಯೋಗಿಸತಕ್ಕದ್ದು
- ಹತ್ತಿಯ ಬಟ್ಟೆಗಳನ್ನು ಧರಿಸುವುದು ಒಳ್ಳೆಯದು. ಬೆಂಕಿಯು ಬೇಗ ಹತ್ತುವ synthetic (naylon/rayan/silk) ಬಟ್ಟೆಗಳನ್ನು ಬಳಸಕೂಡದು
- ಹೆಣ್ಣು ಮಕ್ಕಳು ಕೂದಲನ್ನು ಚೆನ್ನಾಗಿ ಹಿಂದಕ್ಕೆ ಕಟ್ಟಿಕೊಳ್ಳತಕ್ಕದ್ದು
- ಹಚ್ಚಿದರು ಹತ್ತಲಾರದ ಪಟಾಕಿಗಳನ್ನು ಮತ್ತೆ ಹಚ್ಚಬಾರದು
- use protection glasses (ರಕ್ಷಣಾತ್ಮಕ ಕನ್ನಡಕಗಳನ್ನು ಉಪಯೋಗಿಸತಕ್ಕದ್ದು)
- ಒಂದು ಬಕೆಟ್ ತುಂಬಾ ನೀರನ್ನು ತುಂಬಿಸಿಕೊಂಡು ಸಿದ್ಧವಾಗಿರಿಸಿಕೊಳ್ಳತಕ್ಕದ್ದು

### ಸುರಕ್ಷಿತ ವಿಲೇವಾರಿ

- ಹಚ್ಚಿದ ಪಟಾಕಿಗಳನ್ನು ಜನರು ನಡೆಯಲಾರದಂತಹ, ದನಕರುಗಳು ತಿನ್ನಲಾರದಂತಹ ಜಾಗದಲ್ಲಿ ಹಾಕಬೇಕು
- ಉಳಿದಂತಹ ಪಟಾಕಿಗಳನ್ನು ಮನೆಯಲ್ಲಿ ಮಕ್ಕಳಿಗೆ ಸಿಗದಂತಹ ಜಾಗದಲ್ಲಿ ಇಡಬೇಕು (avoid kitchen, cylinder,ups battery areas)

### ಪಟಾಕಿಗಳಿಂದ ಗಾಯವಾದಾಗ ಅನುಸರಿಸಬೇಕಾದ ಪ್ರಧಾನ ಚಿಕಿತ್ಸೆ

- ಗಾಯವಾದ ಜಾಗವನ್ನು ಸ್ವಚ್ಛವಾದ ತಂಪಾದ ನೀರಿನಿಂದ 10-20 ನಿಮಿಷಗಳವರೆಗೂ ತೊಳೆಯ ತಕ್ಕದ್ದ
- ಯಾವುದೇ ತರಹದ ಮುಲಾಮು, ಎಣ್ಣೆ, ಬೆಣ್ಣೆ, ಪುಡಿಯನ್ನು ಹಚ್ಚಬಾರದು
- ಗಾಯ ತೊಳೆದಾದ ಮೇಲೆ ಸ್ವಚ್ಛವಾದ ತಂಪಾದ ಹತ್ತಿ ಬಟ್ಟೆಯನ್ನು ಹೊದಿಸಿರಿ. ಗಂಜಿನಂತಹ ಬಟ್ಟೆ ಬೇಡ ನಂತರ ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆಯಿರಿ.

| **ಡಾ. ಎಂ.ಮಂಜುನಾಥ್**
ಕಣ್ಣಿನ ತಜ್ಞರು, ಸಾಯಿ ಅರವಿಂದ್ ಆಸ್ಪತ್ರೆ, ಹೊಸಪೇಟೆ




ಮೈಕ್ರೋ ನ್ಯೂಸ್

## ಎಂಡಿಆರ್‌ಎಸ್ ಶಾಲೆಯಲ್ಲಿ ಗಣಿತ ಶಿಕ್ಷಕ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಗಂಗಾವತಿ ತಾಲ್ಲೂಕಿನ ಹೇಮಗುಡ್ಡದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾತ್ಕಾಲಿಕವಾಗಿ ಖಾಲಿ ಇರುವ ಗಣಿತ ವಿಷಯದ ಸಹ ಶಿಕ್ಷಕರ 01 ಹುದ್ದೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಬೋಧಿಸಲು ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಗಣಿತ ಶಿಕ್ಷಕರು (ಪಿ.ಸಿ.ಎಮ್) ಹುದ್ದೆಗೆ ಅರ್ಜಿ ಸಲ್ಲಿಸಲು ಬಿ.ಎಸ್‌ಸಿ, ಬಿಎಡ್ ಮತ್ತು ಟಿಇಟಿ ಕಡ್ಡಾಯ ವಿದ್ಯಾರ್ಹತೆ ಹೊಂದಿರಬೇಕು. ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ನವೆಂಬರ್ 16 ರೊಳಗೆ ವಸತಿ ಶಾಲೆಗೆ ಅರ್ಜಿ ಸಲ್ಲಿಸಬಹುದು. ವಸತಿ ಶಾಲೆ ಆದುದರಿಂದ ಮಹಿಳಾ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ಇರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ನ.16 ರಂದು ಮಧ್ಯಾಹ್ನ 02.30 ಗಂಟೆಗೆ ಮಾದರಿ ಬೋಧನೆಯೊಂದಿಗೆ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೇಮಗುಡ್ಡ, ತಾ.ಗಂಗಾವತಿ, ಜಿ.ಕೊಪ್ಪಳ–583227,ಮೊ.ಸಂ:9620877536 ಗೆ ಸಂಪರ್ಕಿಸಬಹುದು

## ಹುದ್ದೆಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಯಿಂದ 2023–24ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ಕಾರ್ಯಕ್ರಮದಡಿ ವಿಜಯನಗರ ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹಅಭ್ಯರ್ಥಿಗಳಿಂದಅರ್ಜಿಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ: ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಜಿಲ್ಲಾ ಹಣಕಾಸು ಮತ್ತು ಲಾಜಿಸ್ಟಿಕ್ ಸಲಹೆಗಾರರು, ತಜ್ಞ ವೈದ್ಯರು, ಪ್ರಯೋಗಾಲಯ ತಂತ್ರಜ್ಞರು, ಭೌತಚಿಕಿತ್ಸಕರು, ಜಿಲ್ಲಾ ಸಲಹೆಗಾರರು, ಸಮಾಜಕಾರ್ಯಕರ್ತರು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕ್ಷೇಮಕೇಂದ್ರ ಕಾರ್ಯಕ್ರಮ ಸಂಯೋಜಕರ ತಲಾ ಒಂದು ಹುದ್ದೆಗಳು, ಶುಶ್ರೂಷಕಿಯರ 2 ಹುದ್ದೆಗಳು ಮತ್ತು 9 ವೈದ್ಯಾಧಿಕಾರಿ (ಮೆಡಿಕಲ್ ಆಫೀಸರ್) ಹುದ್ದೆಗಳು ಖಾಲಿ ಇದ್ದು, ಅರ್ಹತೆ ಹಾಗೂ ಹೆಚ್ಚಿನ ಮಾಹಿತಿಯು ವಿಜಯನಗರ ವೆಬ್‌ಸೈಟ್ ್ಷಣಣಿಕಿ://ತುರಿಚಿಥಿಚಿಟಿಚಿರಿಚಿಡಿಚಿ.ಟಿiಛಿ.iಟಿ/ ನಲ್ಲಿ ಲಭ್ಯವಿರುತ್ತದೆ.

ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರದಂತಿರುತ್ತದೆ. ಆಯ್ಕೆಯ ಪ್ರಕ್ರಿಯೆ ಯಾವುದೇ ಬದಲಾವಣೆಯಾದರೂ ಅಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿರುತ್ತದೆ. ಕೋವಿಡ್–19 ರಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು. 6 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.2 ರಷ್ಟು, 6 ತಿಂಗಳು 1 ದಿನದಿಂದ 12 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.4 ರಷ್ಟು, 12 ತಿಂಗಳು 1 ದಿನದಿಂದ 18 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.6 ರಷ್ಟು, 18 ತಿಂಗಳು 1 ದಿನದಿಂದ 24 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.8ರ ಕೃಪಾಂಕವನ್ನು ನೀಡಲಾಗುವುದು. ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಶೇಕಡ ಮತ್ತು ಕೋವಿಡ್–19 ಸೇವಾ ಅವಧಿಯ ಕೃಪಾಂಕವನ್ನು ಒಟ್ಟುಗೂಡಿಸಿ ಮೆರಿಟ್ ಲಿಸ್ಟ್ ಅನ್ನು ತಯಾರಿಸಲಾಗುವುದು ಮತ್ತು ಹೊಸ ರೋಸ್ಟರ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು. ತಜ್ಞ ವೈದ್ಯರು ಮತ್ತು ವೈದ್ಯಾಧಿಕಾರಿಗಳ ಸಂಖ್ಯೆ ತುಂಬುವವರೆಗೆ ನೇರ ಸಂದರ್ಶ ಮೂಲಕ ಆಯ್ಕೆ ಪ್ರಕ್ರಿಯೆ ಮುಂದುವರೆಸಲಾಗುವುದು.

ಅರ್ಹ ಅಭ್ಯರ್ಥಿಗಳು ಹುದ್ದೆಯ ಕುರಿತು ಹುದ್ದೆಗೆ ಸಂಬಂಧಿಸಿದ ಅರ್ಜಿಯನ್ನು ಪಡೆದು, ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಿ, ಅಗತ್ಯ ಧಾಖಲಾತಿಗಳ ಧೃಡೀಕೃತ ಪ್ರತಿಗಳೊಂದಿಗೆ ಅರ್ಜಿಯನ್ನು ನ.23 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಷೇಧಿತ ಪಟಾಕಿಗಳ ಮಾರಾಟಕ್ಕೆ ಕಣ್ಗಾವಲು, ಮಾರಿದ್ರೆ ಕಠಿಣ ಕ್ರಮ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಡಕ್ ಸೂಚನೆ । ಶಬ್ಧ ಮಾಲೀನ್ಯದಿಂದ ಜೀವ ಸಂಕುಲಗಳ ಮೇಲೆ ದುಷ್ಪರಿಣಾಮ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿ, ಸಿಡಿಮದ್ದುಗಳ ಮಾರಾಟ ಮತ್ತು ಬಳಕೆಯನ್ನು ನಿಯಂತ್ರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ತಿಳಿಸಿದ್ದಾರೆ.

ಪ್ರತಿ ವರ್ಷವು ದೀಪಾವಳಿ ಹಬ್ಬವನ್ನು ಸಂಪ್ರಾದಾಯಿಕವಾಗಿ ಆಚರಿಸಲಾಗುತ್ತದೆ. ಈ ಹಿಂದೆ ದೀಪಾವಳಿ ಹಬ್ಬವನ್ನು ದೀಪಗಳನ್ನು ಬೆಳೆಗಿಸುವ ಮೂಲಕ ಆಚರಿಸಿ ಮನಸ್ಸಿನ ಕತ್ತಲನ್ನು ಹೊರದೂಡಿ ಬೆಳಕಿನಡೆಗೆ ಸಾಗುವ ಸಂದೇಶವನ್ನು ಸಾರುವುದು ಸಾಮಾನ್ಯವಾಗಿತ್ತು.

ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕ ಭರಾಟೆಯಲ್ಲಿ ಪಟಾಕಿಗಳನ್ನು ಸಿಡಿಸುವ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತಿದೆ. ಈ ರೀತಿ ಪಟಾಕಿಗಳನ್ನು ಸಿಡಿಸುವುದರಿಂದ ವಾಯು ಮಾಲಿನ್ಯಾ ಹೆಚ್ಚಾಗಿ ಶಬ್ದ ಮಾಲಿನ್ಯದಿಂದ ಮನುಷ್ಯನ ಮತ್ತು ಜೀವ ಸಂಕುಲಗಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತಿರುವುದು, ದೇಶದಾದ್ಯಂತ ನಡೆಸಿದ ಅಧ್ಯಯನದಿಂದ ಸಾಬಿತಾಗಿದೆ. 2018ರ ರಾಷ್ಟ್ರೀಯ ಹಸಿರು ಪ್ರಾಧಿಕಾರದ ಆದೇಶದಂತೆ ಸಿ.ಎಸ್.ಐ.ಆರ್–ಎನ್.ಇ.ಇ.ಆರ್.ಐ ಇವರು ಶಿಫಾರಸ್ಸು ಮಾಡಿದ ಹಸಿರು ಪಟಾಕಿಗಳನ್ನು ಮಾತ್ರ ಉಪಯೋಗಿಸುವಂತೆ ಸರ್ವೊಚ್ಚ ನ್ಯಾಯಾಲಯವು 2018ರ ಅಕ್ಟೋಬರ್ 23 ಮತ್ತು 31ರಲ್ಲಿ ಸ್ಪಷ್ಟ ನಿರ್ದೇಶನಗಳನ್ನು ನೀಡಿರುತ್ತದೆ.

2023ರ ದೀಪಾವಳಿ ಹಬ್ಬದ ದಿನಗಳಂದು ಪಟಾಕಿಗಳಿಂದಾಗುವ ಶಬ್ಧ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಸಲು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಿವಿಧ ಕ್ರಮ ಜರುಗಿಸಲು ಸೂಚಿಸಲಾಗಿದೆ. ಅದರಂತೆ ಜಿಲ್ಲಾ ಅಗ್ನಿ ಶಾಮಕ ಇಲಾಖೆ ಅಧಿಕಾರಿ, ಸ್ಥಳೀಯ ಸಂಸ್ಥೆಯ ಆರೋಗ್ಯಾಧಿಕಾರಿಗಳು, ತಹಶೀಲ್ದಾರ್, ಜಿಲ್ಲಾ ಪರಿಸರ ಅಧಿಕಾರಿ, ಪೊಲೀಸ್ ಅಧಿಕಾರಿಗಳು, ಆಸಕ್ತ ನಾಗರೀಕರು ಹಾಗೂ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯಪಡೆಗಳನ್ನು ರಚಿಸಿ, ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಪಟಾಕಿ ಮಾರಾಟಗಾರರ ಗೋಧಾಮುಗಳನ್ನು ಪರಿಶೀಲಿಸಬೇಕು ಹಾಗೂ ಅಲ್ಲಿ ಹಸಿರು ಪಟಾಕಿಯಲ್ಲದೇ ಇನ್ನಾವುದಾದರೂ ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದಲ್ಲಿ, ಇಡೀ ಗೋಧಾಮನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಹಾಗೂ ಸಂಬಂಧಿತ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು.



ಎಲ್ಲಾ ಹಸಿರು ಪಟಾಕಿಗಳ ಮೇಲೆ ಹಾಗೂ ಅವುಗಳ ಪ್ಯಾಕೆಜ್ ಮೇಲೆ ಹಸಿರು ಪಟಾಕಿಯ ಚಿನ್ಹೆ ಹಾಗೂ ಕ್ಯೂ.ಆರ್.ಕೋಡ್ ಸಹಾ ಇರುತ್ತದೆ. ಈ ಚಿನ್ಹೆಯ ಬಗ್ಗೆ ಸಂಬಂಧಪಟ್ಟ ಜಿಲ್ಲೆಯ ಪರಿಸರ ಅಧಿಕಾರಿಗಳಿಂದ ಖಚಿತ ಪಡಿಸಿಕೊಳ್ಳಬೇಕು. ಈ ಚಿನ್ಹೆ ಇಲ್ಲದ ಪಟಾಕಿ ಹಸಿರು ಪಟಾಕಿ ಎನಿಸುವುದಿಲ್ಲ ಮತ್ತು ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು. ಪ್ರಮುಖವಾಗಿ ಹಸಿರು ಪಟಾಕಿ ಮಳಿಗೆಯಲ್ಲಿ ತಯಾರಿಸುವವರು ಹಾಗೂ ಮಾರಾಟ ಮಾಡುವವರು ಮತ್ತು ಏಜೆಂಟ್ ಗಳಿಗೆ ಮಾತ್ರ ಅನುಮತಿ ನೀಡುವುದು. ಯಾವುದೇ ಹಸಿರು ಪಟಾಕಿಗಳ ಪ್ಯಾಕೆಟ್ ಗಳನ್ನು ರ‍್ಯಾಂಡಮ್ ಆಗಿ ಸಂಗ್ರಹಿಸಿ, ನಿಗದಿತ ವಿಧಿ ವಿಧಾನಗಳ ಮೂಲಕ ಅವುಗಳ ಶಬ್ದ ಮಟ್ಟವನ್ನು ಮಾಪನ ಮಾಡಬೇಕು ಮತ್ತು ನಿಗದಿತ ಗುಣಮಾಪನಗಳಿಗೆ ಸರಿಹೊಂದದಿದ್ದಲ್ಲಿ, ಅವುಗಳನ್ನು ಸಹಾ ಕೂಡಲೆ ಮುಟ್ಟುಗೋಲು ಹಾಕಿಕೊಳ್ಳಬೇಕು. ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಹಾಗೂ ಇವುಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಬಳಸಬೇಕು.

ಸರ್ವೋಚ್ಚ ನ್ಯಾಯಾಲಯದ ನಿದೇಶನಗಳ ಕುರಿತಂತೆ ಸಾರ್ವಜನಿಕರಿಗೆ ಮತ್ತು ಮಕ್ಕಳಲ್ಲಿ ಅರಿವು ಮೂಡಿಸಲು ಪರಿಣಾಮಕಾರಿಯಾಗಿ ಜಾಗೃತಿ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ ಮತ್ತು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳುವುದು. ಯಾವುದೇ ಸ್ಥಳೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಹಾಗೂ ಇನ್ನಾವುದೇ ನಿಷೇಧಿತ ಪ್ರದೇಶದಲ್ಲಿ ಯಾವುದೇ ರೀತಿಯ ಪಟಾಕಿಗಳನ್ನು ಸ್ಫೋಟಿಸುವಂತಿಲ್ಲ ಅಥವಾ ಬಳಸುವಂತಿಲ್ಲ. ಎಲ್ಲಾ ಸ್ಥಳೀಯ ಸಂಸ್ಥೆ ಹಾಗೂ ಪೋಲಿಸ್ ಇಲಾಖೆಗಳು ಇದನ್ನು ಕಡ್ಡಾಯವಾಗಿ ಪಾಲಿಸಬೇಕು. ಪರಿಸರ ಸ್ನೇಹಿ ದೀಪಾವಳಿ ಹಬ್ಬದ ಕುರಿತು ಸಾರ್ವಜನಿಕ ಸ್ಥಳಗಳಾದ ರೈಲ್ವೇ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಕರಪತ್ರ, ಭಿತ್ತಿಪತ್ರಗಳನ್ನು ಹಂಚುವ ಮೂಲಕ, ವಿಡಿಯೋ ಮತ್ತು ಆಡಿಯೋ ಮುಖಾಂತರ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಬೇಕು. ಸ್ಥಳೀಯ ಟಿವಿ ಹಾಗೂ ರೇಡಿಯೋ ಮುಖಾಂತರ ಸಾರ್ವಜನಿಕರಿಗೆ ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸುವ ಬಗ್ಗೆ ಜಾಗೃತಿ ಮೂಡಿಸಿ. ದೀಪಾವಳಿ ಸಮಯದಲ್ಲಿ ಉತ್ಪಾದನೆಯಾಗುವಂತಹ ಘನತ್ಯಾಜ್ಯವನ್ನು ವೈಜ್ಞಾನಿಕ ವಿಲೇವಾರಿ ಮಾಡಲು ಸೂಕ್ತ ಕ್ರಮಜರುಗಿಸಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ಹೊರ ರಾಜ್ಯಗಳಿಂದ ಅನಧಿಕೃತವಾಗಿ ಯಾವುದೇ ರೀತಿಯ ನಿಷೇಧಿತ ಪಟಾಕಿಗಳನ್ನು ಸಾಗಾಟ ಮಾಡುತ್ತಿದ್ದಲ್ಲಿ ಕೂಡಲೇ ವಾಣಿಜ್ಯ ತೆರಿಗೆ ಇಲಾಖೆಯವರಿಂದ ರಾಜ್ಯದ ಗಡಿಗಳಲ್ಲಿರುವ ತಮ್ಮ ತಮ್ಮ ತನಿಖಾ ಠಾಣೆಗಳ ಮುಖಾಂತರ ನಿಷೇಧಿತ ಪಟಾಕಿಗಳು ಹಾಗೂ ಸಂಬಂಧಿತ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಸಾಗಾಟ ಮಾಡುವ ವಾಹನವನ್ನು ಸಾರಿಗೆ ಇಲಾಖೆಯಿಂದ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಇಲಾಖೆಗಳ ಸಹಯೋಗವನ್ನು ಪಡೆದುಕೊಂಡು ಕ್ರಮ ಕೈಗೊಳ್ಳಬೇಕು.

ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿ, ಸಿಡಿಮದ್ದುಗಳ ಮಾರಾಟ ಮತ್ತು ಬಳಕೆಯನ್ನು ನಿಯಂತ್ರಿಸುವ ಹಾಗೂ ನಿಯಮ ಉಲ್ಲಂಘಿಸಿ ಅನಧೀಕೃತವಾಗಿ ತಯಾರಿ ಅಥವಾ ಮಾರಾಟ ಮಾಡುವ ವ್ಯಕ್ತಿ ಮೇಲೆ ಕಾನೂನು ಕ್ರಮ ಜರುಗಿಸಲು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಮೂಲಕ ಆದೇಶಿಸಲಾಗಿದೆ. ಈ ಅಧಿಸೂಚನೆಯಂತೆ ನಗರ ಸ್ಥಳೀಯ ಸಂಸ್ಥೆಗಳ ಜಿಲ್ಲೆಯಲ್ಲಿ ನಿಷೇಧಿತ ಪಟಾಕಿ, ಸಿಡಿಮದ್ದುಗಳ ಮಾರಾಟ ಮತ್ತು ಬಳಕೆಯನ್ನು ನಿಯಂತ್ರಿಸುವ ಮತ್ತು ನಿಷೇಧಿಸುವುದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕರನ್ನು ನೊಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಕನ್ನಡಿಗರ ಅಭಿಮಾನ ಬರಿ ಮಾತಾಗದಿರಲಿ ಬಳಕೆಯಾದರೆ ಮಾತ್ರ ಕನ್ನಡ ಉಳಿಯಲಿದೆ

### ಸಾಹಿತಿ ಡಾ.ಮೃತ್ಯುಂಜಯ ರುಮಾಲೆ ಹೇಳಿಕೆ । ಕನ್ನಡ ಭಾಷೆಯು ಪ್ರಪಂಚದ ಪ್ರಮುಖ ಐದು ಭಾಷೆಗಳಲ್ಲಿ ಒಂದು

**ಹಂಪಿ ಟೈಮ್ಸ್ ಹೊಸಪೇಟೆ:**
ಪೂರ್ವ ಶಿಲಾಯುಗದಷ್ಟು ಹಳೆಯ ಕುರುಹುಗಳನ್ನು ಹೊಂದಿರುವ ಕನ್ನಡ ಭಾಷೆಯು ಪ್ರಪಂಚದ ಪ್ರಮುಖ ಐದು ಭಾಷೆಗಳಲ್ಲಿ ಒಂದಾಗಿದೆ ಎಂದು ವಿಜಯನಗರ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಮೃತ್ಯುಂಜಯ ರುಮಾಲೆ ತಿಳಿಸಿದರು.




ನಗರದ ವಿಜಯನಗರ ಮಹಾವಿದ್ಯಾಲಯದ ಸುವರ್ಣ ಭವನದಲ್ಲಿ ಕರ್ನಾಟಕ ಸುವರ್ಣ ಸಂಭ್ರಮಾಚರಣೆ ಹಾಗೂ ಭಾವಗೀತೆ ಬಿಡುಗಡೆ ಕಾರ್ಯಕ್ರಮದಲ್ಲಿ ಶುಕ್ರವಾರ ಮಾತನಾಡಿದರು.

ಕರ್ನಾಟಕ ನಾಮಕರಣ ಹಿನ್ನೆಲೆ ಎನ್ನುವ ವಿಷಯ ಕುರಿತು ಉಪನ್ಯಾಸ ನೀಡಿ ಮಾತನಾಡಿದರು. ಕಾವೇರಿಯಿಂದ ಗೋದಾವರಿಯವರೆಗೆ ಇದ್ದ ನಾಡು, ಕರ್ನಾಟಕವಾಗಿತ್ತು. ಈಗ ಗೋದಾವರಿ ಇರಲಿ, ಕಾವೇರಿ ನೀರು ಸಹ ಕರ್ನಾಟಕಕ್ಕೆ ದೊರಕದೇ ಇರುವ ಪರಿಸ್ಥಿತಿ ಇದೆ. ಕನ್ನಡಿಗರೇ ಕನ್ನಡವನ್ನು ಪರಿಪೂರ್ಣವಾಗಿ ಬಳಸದೇ ಇರುವುದರಿಂದ ಗೋದಾವರಿಯಿಂದ ಕೃಷ್ಣಾ ನದಿ ತೀರದವರೆಗೆ ಕನ್ನಡ ಬಂದು ನಿಂತಿದೆ. ಇದು ಕೃಷ್ಣಾ ನದಿದಾಟಿ ತುಂಗಭದ್ರೆಗೆ ಬಂದು ನಿಂತರೂ ಆಶ್ಚರ್ಯಪಡಬೇಕಿಲ್ಲ. ಹೀಗೆ ನಮ್ಮ ಕನ್ನಡದ ಅಸ್ಮಿತೆ ಕಳೆಯುತ್ತಾ ಹೋದರೆ, ಕರ್ನಾಟಕದಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗುತ್ತಾರೆ. ಈ ನಿಟ್ಟಿನಲ್ಲಿ ನಾಡು–ನುಡಿಯ ಅಭಿಮಾನವನ್ನಿಟ್ಟುಕೊಂಡು ಜಂಬುನಾಥ ಹೆಚ್.ಎಂ.ಮತು ಜಿ.ಯರ್ರಿಸ್ವಾಮಿ ಬರೆದ ಕವನಗಳು ಹೊರನಾಡಿಗೂ ತಲುಪುವಂತಿವೆ ಎಂದರು.

ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷ ಅಸುಂಡಿ ಬಿ. ನಾಗರಾಜಗೌಡ ಮಾತನಾಡಿ, ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎನ್ನುವ ಕವಿವಾಣಿಯಂತೆ, ಕನ್ನಡಿಗರು ಪರಭಾಷೆಯ ವ್ಯಾಮೋಹಕ್ಕೆ ಒಳಗಾಗಿ ಅವರ ಭಾಷೆಯನ್ನು ಕಲಿಯಲು ಹೋಗುವ ಬದಲು, ನಮ್ಮ ಕನ್ನಡದ ಹಿರಿಮೆ–ಗರಿಮೆಯ ಬಗ್ಗೆ ಅಭಿಮಾನವನ್ನಿಟ್ಟುಕೊಂಡು ಬೆಳೆಯಬೇಕು. ಮುಂದಿನ ನಮ್ಮ ಪೀಳಿಗೆಗೂ ಕನ್ನಡದ ಅಭಿಮಾನ ಬರುವಂತೆ ಬೆಳೆಸಬೇಕು ಎಂದರು.



ವಿಜಯನಗರ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಧುರಚನ್ನ ಶಾಸ್ತ್ರಿ ಹಿರೇಮಠ ಮತ್ತು ಕೊಟ್ಟೂರಿನಕೊಟ್ಟೂರೇಶ್ವರ ಮಹಾವಿದ್ಯಾಲಯದ ಅಧ್ಯಕ್ಷ ಸಿದ್ಧರಾಮ ಕಲ್ಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ವಿಜಯನಗರ ಮಹಾವಿದ್ಯಾಲಯದ ಪ್ರಾಚಾರ್ಯ ಟಿ.ಸುಭಾಷ್ ಅಧ್ಯಕ್ಷತೆ ವಹಿಸಿದ್ದರು. ಅಶ್ವಿನಿ ಶಾಲೆಯ ಮುಖ್ಯೋಪಾಧ್ಯಾಯ ಕೆ.ಬಿ.ವಿಜಯಕುಮಾರ್, ಹೊಸಪೇಟೆ ಕನ್ನಡಪರ ಸಂಘಟನೆಗಳ ಸಂಚಾಲಕ ಪಿ.ವಿ.ವೆಂಕಟೇಶ್ ಉಪಸ್ಥಿತರಿದ್ದರು.

ಜೆ.ಹೆಚ್.ಎಂ. ತಿಪ್ಪೇಶ್, ಭೂಮಿಕಾ ಗಡಾದ, ನಿರ್ಮಲಾ ನೀಲಿ ಭಾವಗೀತೆಗಳನ್ನು ಪ್ರಸ್ತುತ ಪಡಿಸಿದರು. ಜಂಬುನಾಥ ಹೆಚ್.ಎಂ. ರಚಿಸಿದ ಕಲಿಯಲಿ ಕನ್ನಡ ಕಂದಮ್ಮಗಳು ಎನ್ನುವ ಭಾವಗೀತೆ ಹಾಗೂ ಜಿ. ಯರಿಸ್ವಾಮಿ ಇವರ ಅವ್ವಾ ಎನ್ನುವ ಎರಡು ಭಾವಗೀತೆಗಳು ಯೂಟೂಬ್‌ನಲ್ಲಿ ಬಿಡುಗಡೆಗೊಂಡವು. ಇದೇ ಸಂದರ್ಭದಲ್ಲಿ ಅಶ್ವಿನಿ ಶಾಲೆಯ ವಿದ್ಯಾರ್ಥಿಗಳು ಸಮೂಹ ನೃತ್ಯ ನೆರವೇರಿಸಿಕೊಟ್ಟರು. ಶಿಕ್ಷಣ ಇಲಾಖೆಯ ಸಮೂಹ ಸಂಪನ್ಮೂಲ ವ್ಯಕ್ತಿಎನ್.ನಾಗರಾಜ ನಿರ್ವಹಿಸಿದರು.

# ದೀಪಾವಳಿ ಹಬ್ಬ ಪರಿಸರ ಸ್ನೇಹಿಯಾಗಿ ಆಚರಿಸಿ

**ಹಂಪಿ ಟೈಮ್ಸ್ ಹೊಸಪೇಟೆ**
ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯನ್ನಾಗಿಸಿ ಆಚರಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಿಜಯನಗರ ಪ್ರಾದೇಶಿಕ ಕಚೇರಿ ಜಿಲ್ಲಾ ಪರಿಸರ ಅಧಿಕಾರಿ ಎಸ್.ಸಿ.ಸುರೇಶ್ ಅವರು ಮನವಿ ಮಾಡಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಬೆಳಕಿನ ಹಬ್ಬ ದೀಪಾವಳಿಯನ್ನು ಪರಿಸರ ಸ್ನೇಹಿ ಹಸಿರು ಪಟಾಕಿ ಬಳಕೆಯೊಂದಿಗೆ ಆಚರಿಸಿ ಮಾಲಿನ್ಯ ನಿಯಂತ್ರಣಕ್ಕೆ ಮುಂದಾಗಬೇಕು. ಜಿಲ್ಲಾ ವ್ಯಾಪ್ತಿಯಲ್ಲಿ ಪಟಾಕಿಗಳ ಮಾರಾಟ ಮತ್ತು ನಿಯಂತ್ರಿಸುವ ಕುರಿತು ಈಗಾಗಲೇ ಹಸಿರು ಪಟಾಕಿ ಮಾರಾಟಕ್ಕೆ ಮಾತ್ರ ಅವಕಾಶವಿದ್ದು, ಹಸಿರು ಪಟಾಕಿ ಅವುಗಳ ಪ್ಯಾಕೆಟ್ ಮೇಲೆ ಹಸಿರು ಪಟಾಕಿಯ ಚಿಹ್ನೆ, ಕ್ಯೂಆರ್ ಕೋಡ್ ಇರುವ ಪಟಾಕಿಗಳನ್ನೆ ಉಪಯೋಗಿಸಬೇಕು. ಸುಪ್ರಿಂ ಕೋರ್ಟ್ ಆದೇಶದಂತೆ ಹಸಿರು ಪಟಾಕಿಗಳ ಹೊರತು ಪಡಿಸಿ ಉಳಿದ ಪಟಾಕಿಗಳನ್ನು ಬಳಕೆ ಮಾಡಬಾರದು. ರಾತ್ರಿ 8 ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಹಸಿರು ಪಾಟಾಕಿ ಸಿಡಿಸಲು ಅವಕಾಶ ನೀಡಲಾಗುವುದು. ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳು ಮಾತ್ರ ಬಳಸಬೇಕು.

## ಸುತ್ತ ಮುತ್ತ
## ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ನಿರ್ವಹಣೆ ಕೊರತೆ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ತಡವೇಕೆ ? ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋ ಮಾಡಿ, ನಿಮ್ಮ ಅಭಿಪ್ರಾಯದೊಂದಿಗೆ ಹಂಪಿ ಟೈಮ್ಸ್ ಪತ್ರಿಕೆ ವಾಟ್ಸಪ್ ನಂಬರ್ ಗೆ ಕಳುಹಿಸಿ. ಸಂಬಂಧಿಸಿದವರ ಗಮನಕ್ಕೆ ತರುವ ಪ್ರಯತ್ನ ಹಂಪಿ ಟೈಮ್ಸ್ ಮಾಡಲಿದೆ.

**M:9448633038**
**hampitimes@gmail.com**

## ತುಂಗಭದ್ರಾ ನೀರಿನ ಮಟ್ಟ



| ಶುಕ್ರವಾರ : 10-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.96 ಅಡಿ |
| ಒಳ ಹರಿವು | 6190 ಕ್ಯುಸೆಕ್ |
| ಹೊರ ಹರಿವು | 9362 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.589 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.93 ಅಡಿ |
| ಒಳ ಹರಿವು | 4296 ಕ್ಯುಸೆಕ್ |
| ಹೊರ ಹರಿವು | 10293 ಕ್ಯುಸೆಕ್ |
| ಸಾಮರ್ಥ್ಯ | 101.500 ಟಿಎಂಸಿ |

# ಕರುನಾಡ ಭಾಷೆ, ನೆಲ, ಜಲ ಉಳಿವಿಗೆ ಕನ್ನಡಿಗರು ಕಂಕಣ ಬದ್ಧರಾಗಿ ನಿಲ್ಲಬೇಕು

## ಕರ್ನಾಟಕ ಸಮರ ಸೇನೆ ಸಂಘಟನೆಯ ತಾಲೂಕು ಗೌರವಾಧ್ಯಕ್ಷೆ ಸಾಹಿತಿಗಳಾದ ಅಂಜನಾ ಕೃಷ್ಣಪ್ಪ ಹೇಳಿಕೆ

**ಹಂಪಿ ಟೈಮ್ಸ್ ಹೂವಿನಹಡಗಲಿ**

ಕನ್ನಡ ಭಾಷೆ ನಾಡು-ನುಡಿಯ ಸಂರಕ್ಷಣೆಗೆ ಪ್ರತಿಯೊಬ್ಬ ಕನ್ನಡಿಗರು ಕಂಕಣ ಬದ್ಧರಾಗಿ ನಿಲ್ಲಬೇಕೆಂದು ಕರ್ನಾಟಕ ಸಮರ ಸೇನೆ ಸಂಘಟನೆಯ ತಾಲೂಕು ಗೌರವಾಧ್ಯಕ್ಷೆ ಸಾಹಿತಿಗಳಾದ ಅಂಜನಾ ಕೃಷ್ಣಪ್ಪ ಹೇಳಿದರು. ಅವರು ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಆಯೋಜಿಸಿದ್ದ ಕರುನಾಡ ಭಾರ್ಗವ ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ, ಕಾರ್ಯಕ್ರಮದ ಸಮಾರಂಭದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶ್ರೇಷ್ಠ ಸಾಹಿತಿ ಕಲಾವಿದರನ್ನು, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಮಹಾ ನಾಯಕರನ್ನು ಕೊಟ್ಟ ಹೆಮ್ಮೆಯ ನಾಡು ನಮ್ಮ ಕರ್ನಾಟಕ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿದೆ. ಸಂಸ್ಕೃತಿ ಕಲೆ ಸಂಗೀತಗಳ ತವರಿನ ಬೀಡಾದ ನಮ್ಮ ಕರುನಾಡು ಭಾಷೆ ನೆಲ ಜಲ ಉಳಿವಿಗಾಗಿ ಪ್ರತಿಯೊಬ್ಬ ಕನ್ನಡಿಗರು ಕನ್ನಡಪರ ಸಂಘಟನೆಗಳ ಜೊತೆ ಕೈಜೋಡಿಸಿ ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಸಂಘಟನೆಯ ಕಾನೂನು ಸಲಹೆಗಾರರಾದ ಗುರು ಬಸವರಾಜ ವಕೀಲರು ಮಾತನಾಡಿ, ಕನ್ನಡಪರ ಹೋರಾಟ ಮಾಡುವುದರ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಕೆಲಸ ಮಾಡುತ್ತಿರುವ ಕರ್ನಾಟಕ ಸಮರಸೇನೆ ಸಂಘಟನೆಯ ಕಾರ್ಯ ಶ್ಲಾಘನೀಯ. ಮುಂದಿನ ದಿನಮಾನಗಳಲ್ಲಿ ಇಂತಹ ಹಲವಾರು ಸಮಾಜಮುಖಿ ಕೆಲಸಗಳನ್ನು ಸಂಘಟನೆ ಮಾಡಲೆಂದು ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥಾಪಕ ರಾಜ್ಯ ಕಾರ್ಯಧ್ಯಕ್ಷರಾದ ಡಾ: ಬಿ. ವಾಸುದೇವ್ ಮಾತನಾಡಿ, ಕರ್ನಾಟಕ ಸಮರಸೇನೆ ಸಂಘಟನೆ ಆರ್ ಶಂಕರ್ ರಾಜ್ಯಾಧ್ಯಕ್ಷರು ಅವರ ಮಾರ್ಗದರ್ಶನದಲ್ಲಿ ಕನ್ನಡಪರ ನೊಂದವರ ಪರ ಹೋರಾಟ ಮಾಡುತ್ತಾ ರಾಜ್ಯದಲ್ಲೆಡೆ ಹಲವಾರು ಸಮಾಜಮುಖಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿದೆ ಎಂದರು.



ಮಲ್ಲಿಗೆ ಯೋಗ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆರಾದ ಕೋಡಿಹಳ್ಳಿ ಕೊಟ್ರೇಶ್ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ವೈ.ಭಾಗ್ಯ ದೇವಿ, ರಾಜ್ಯ ಉಪಾಧ್ಯಕ್ಷರು ಕರ್ನಾಟಕ ಸಮರ ಸೇನೆ. ಶ್ರೀಮತಿ ದೀಪ, ನಾಗವೇಣಿ ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಬಿ. ಜಯಲಕ್ಷ್ಮಿ, ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷೆ, ಆಶಾ ಜೆ. ಕರ್ನಾಟಕ ಸಮರ ಸೇನೆ ಸಂಘಟನೆಯ ತಾಲೂಕು ಅಧ್ಯಕ್ಷ ಡಿ. ಮುಕುಂದ ಗೌಡ, ತಾಲೂಕು ಉಪಾಧ್ಯಕ್ಷ ಡಿ ಎಂ ಗುರುಮೂರ್ತಿ ಸ್ವಾಮಿ, ಬಂಜಾರ ಘಟಕದ ಅಧ್ಯಕ್ಷರಾದ ಗೋಪಿ ನಾಯ್ಕ, ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಇದ್ದರು. ವಿಜಯನಗರ ಜಿಲ್ಲಾಧ್ಯಕ್ಷರಾದ ಬಿಎಮ್ ವೀರಯ್ಯ ಸ್ವಾಮಿ ಪ್ರಾಸ್ತಾವಿಕ ನುಡಿ ಮಾತನಾಡಿದರು. 2023 ವರ್ಷದ "ಕರುನಾಡ ಭಾರ್ಗವ" ಪ್ರಶಸ್ತಿಗೆ ಭಾಜನರಾದ ಎನ್.ಡಿ ಮಹಾಬಲೇಶ್ವರ ಅಧ್ಯಕ್ಷರು ನಿಸರ್ಗ ಬಳಗ, "ಸಮಾಜ ಸೇವಾ ಸಿರಿ" ಪ್ರಶಸ್ತಿಗೆ ಭಾಜನರಾದ ತಳಕಲ್ ಕರಿಬಸಪ್ಪ ರಿಯಲ್ ಎಸ್ಟೇಟ್ ಉದ್ದಿಮೆದಾರರು. ಮುಖ್ಯಮಂತ್ರಿಗಳ ಪದಕ ಪಡೆದು ಮುಖ್ಯಮಂತ್ರಿಗಳಿಂದ ಸನ್ಮಾನಿಸಿ ಗೌರವಿಸಲ್ಪಟ್ಟ ವಲಯ ಅರಣ್ಯಧಿಕಾರಿ ರೇಣುಕಮ್ಮ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಾದ ಬನ್ನಪ್ಪ, ತುಂಗಭದ್ರಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಅಂಗಡಿ ಸುರೇಶ್, ಪತ್ರಕರ್ತರಾದ ಕನ್ನಡಪ್ರಭ ವರದಿಗಾರರ ಚಂದ್ರು ಕೊಂಚಿಗೇರಿ, ಸಾಹಿತಿಗಳು ಗಾಯಕರು ಪತ್ರಕರ್ತರು ಆದ ಹೆಚ್ ಸುಭಾಷ್ ಚಂದ್ರ ಹೊಳಲು, ರೈತ ಹನುಮಂತ ಬಾಲಪ್ಪನವರ, ನಿವೃತ್ತ ಯೋಧರಾದ ತುಳಸಪ್ಪ, ಅಗ್ನಿಶಾಮಕ ಠಾಣೆಯ ನರಸಪ್ಪ, ಗ್ರಾಮ ಆಡಳಿತಾಧಿಕಾರಿ ವಿ. ಮನೋಹರ್, ವೈದ್ಯರಾದ ಚಂದ್ರಶೇಖರ್ ನಾಯ್ಕ್, ಬಸ್ ಚಾಲಕರಾದ ಎಂಡಿ ನಿಂಗಪ್ಪ, ಜೆಸ್ಕಾಂ ಮಾರ್ಗದಾಳು ಟೀ. ಸರವಣ್ ಗೃಹರಕ್ಷಕ ದಳದ ಸಿಬ್ಬಂದಿ ನಾಗರಾಜ್ ಮಲ್ಕಿ ಒಡೆಯರ್, ಪೌರಕಾರ್ಮಿಕರಾದ ಗೋಣಿಮ್ಮ, ಜುಪ್ಪಣ್ಣನವರ ನಾಗರಾಜ, ದಾಯಾದಿ ರಾಜೇಶ್ವರಿ, ಅಂಗನವಾಡಿ ಕಾರ್ಯಕರ್ತೆ, ವಿಜಯಲಕ್ಷ್ಮಿ, ಆಶಾ ಕಾರ್ಯಕರ್ತೆ ಎಸ್ ವಿಜಯ ಮಲ್ಲಣ್ಣ, ಸೇರಿದಂತೆ ಸಾಧಕರನ್ನು ಗೌರವಿಸಿ ಸನ್ಮಾನಿಸಲಾಯಿತು. ಪತ್ರಕರ್ತರಾದ ನಾಗರಾಜು ಮಲ್ಕಿ ಒಡೆಯರ್ ಕಾರ್ಯಕ್ರಮ ನಿರೂಪಿಸಿದರು.

# ಸಿ.ಸಿ ರಸ್ತೆ ಕಳಪೆ ಕಾಮಗಾರಿ ರಸ್ತೆ ತಡೆದು ಗ್ರಾಮಸ್ಥರ ಪ್ರತಿಭಟನೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕಿನ ಜಂಬುಲಿಂಗನಹಳ್ಳಿ ಗ್ರಾಮದ ಮಾರ್ಗವಾಗಿ ಹಾದುಹೋಗಿರುವ ಹರಪನಹಳ್ಳಿ-ದಾವಣಗೆರೆ ಸಿ ಸಿ ರಸ್ತೆಯು ಅತ್ಯಂತ ಕಳಪೆಯಿಂದ ಕೂಡಿದ್ದು, ರಸ್ತೆಯ ಪಕ್ಕದ ನಿವಾಸಿಗಳು ದೂಳಿನಿಂದ ಕಿರಿ ಕಿರಿಯಾಗಿ ತುಂಬಾ ಸಮಸ್ಯೆಯಾಗಿದೆ.

ಈ ರಸ್ತೆಯು ಎರಡು ಕೋಟಿ ರೂಪಾಯಿಗಳಿಗೆ 6 ತಿಂಗಳ ಹಿಂದೆ ಕಾಮಗಾರಿ ಪೂರ್ಣಗೊಂಡಿತ್ತು. ಅಷ್ಟರಲ್ಲೇ ಮತ್ತೆ ಗುಂಡಿಗಳನ್ನು ಮುಚ್ಚಿ ಸರಿಮಾಡಲಾಗಿತ್ತು ಈಗ ಈ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ದೂಳಿನಿಂದ ಕೂಡಿದೆ ಇದನ್ನು ಖಂಡಿಸಿ ಶುಕ್ರವಾರ ಊರಿನ ಗ್ರಾಮಸ್ಥರು ಸಾಂಕೇತಿವಾಗಿ ರಸ್ತೆ ತಡೆ ನಡೆಸಿ ಇಂಜಿನಿಯರ್ ಪ್ರಕಾಶ್ ಪಟೇಲ್‌ಗೆ ಮನವಿ ಪತ್ರ ಸಲ್ಲಿಸಿದರು.

ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ಮಾತನಾಡಿದ ಪ್ರಕಾಶ್ ಪಟೇಲ್ ನಾನು ಈ ತಾಲೂಕ್ ಗೆ ಹೊಸದಾಗಿ ಬಂದಿದ್ದೇನೆ. ಮುಂದಿನ 15 ದಿನಗಳ ಒಳಗೆ ಹಾಳದ ರಸ್ತೆಯನ್ನು ದುರಸ್ತೆ ಮಾಡಿ ಕೊಡುತ್ತೇನೆ ತಾತ್ಕಾಲಿಕವಾಗಿ ದೂಳು ಆಗದಂತೆ ಟ್ಯಾಂಕರ್ ಮುಖಂತರ ನೀರು ಸಿಂಪಡಿಸುತ್ತೇವೇ ಎಂದರು. ಹಾಗ ಪ್ರತಿಭಟನೆಯನ್ನು ವಾಪಸ್ ಪಡೆಯಲಾಯಿತು.

ಈ ಸಂದರ್ಭದಲ್ಲಿ ಪಿಎಸ್‌ಐ ಎ. ಕಿರಣ್ ಕುಮಾರ್, ಇಂಜಿನಿಯರ್ ಮಹೇಶ್ ನಾಯ್ಕ್. ಗ್ರಾಮ ಪಂಚಾಯತ್ ಸದಸ್ಯ ಸುರೇಶ್. ಹೆಚ್. ಬಿ. ಮಂಜುನಾಥ್, ಕುಬೇರಪ್ಪ, ನಾಗರಾಜ್, ಅಡಿವೆಪ್ಪ, ಹೆಚ್ ನಾಗಪ್ಪ, ಕುಮಾರಪ್ಪ, ರಾಜಪ್ಪ, ಮಲ್ಲೇಶಪ್ಪ, ಬಿ. ಸಿದ್ದಪ್ಪ, ಪಿ. ಜಿ, ಪ್ರಕಾಶ್, ಆರ್, ಬಸವರಾಜ್, ಜಿ. ಸಿದ್ದಪ್ಪ, ವೈ. ರಾಜಪ್ಪ, ಅಂಗಡಿ ರವಿ. ರಾಜಪ್ಪ. ಮಹಿಳೆಯರು. ಮಕ್ಕಳು. ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಪುಟ್ಟರಾಜ ಗವಾಯಿಗಳ ಶಿಷ್ಯ ಡಾ. ಹನುಮಣ್ಣ ನಾಯಕ ದೊರೆ ಇನ್ನಿಲ್ಲ

## ಕನ್ನಡ ವಿವಿ ಸಿಬ್ಬಂದಿಗಳಿಂದ ಸಂತಾಪ



**ಹಂಪಿ ಟೈಮ್ಸ್ ಹೊಸಪೇಟೆ:**

ಹಿಂದೂಸ್ತಾನಿ ಸಂಗೀತವನ್ನು ತಮ್ಮದೇ ಆದ ಶೈಲಿಯಲಿ ರೂಢಿಸಿಕೊಂಡು ಸಂಗೀತ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದ ಡಾ. ಹನುಮಣ್ಣ ನಾಯಕ ದೊರೆ ನಿಧನರಾಗಿರುವುದು ಸಂಗೀತ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ಕನ್ನಡ ವಿವಿ ಕುಲಪತಿ ಡಾ. ಡಿ.ವಿ.ಪರಮಶಿವಮೂರ್ತಿ ಸಂತಾಪ ಸೂಚಿಸಿ ನುಡಿ ನಮನ ಸಲ್ಲಿಸಿದರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಸಂತಾಪ ಸಭೆಯಲ್ಲಿ ಮಾತನಾಡಿದರು.

ಕನ್ನಡ ವಿದ್ಯಾಲಯ ಸಂಗೀತ ಮತ್ತು ನೃತ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಹನುಮಣ್ಣ ನಾಯಕ ದೊರೆ ಅವರು ಬಹು ಅಂಗಾಂಗ ವೈಫಲ್ಯದಿಂದ ನಿಧನ ಹೊಂದಿದ್ದಾರೆ. ವೈಯಕ್ತಿಕ ಸಮಸ್ಯೆಗಳಿದ್ದರೂ ತಮ್ಮ ಸಂಗೀತ ಕ್ಷೇತ್ರವನ್ನು ಬಿಟ್ಟುಕೊಡದೆ ಸೇವೆ ಸಲ್ಲಿಸಿದ್ದಾರೆ. ಅಗಲಿದ ಡಾ. ಹನುಮಣ್ಣ ನಾಯಕ ದೊರೆ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಹಾಗೂ ಕುಟುಂಬಕ್ಕೆ ನೋವು ಭರಿಸುವ ಶಕ್ತಿ ಭಗವಂತ ನೀಡಲಿ ಎಂದರು.

ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದ ಡೀನ್ ಡಾ. ಚಲುವರಾಜು ಮಾತನಾಡಿ, ಶಾಸ್ತ್ರೀಯ ಸಂಗೀತವನ್ನು ಜನಪದ ನೆಲೆಯಲ್ಲಿ ಬೆಳೆಸಿ ಪ್ರೋತ್ಸಾಹಿಸಿದ ವ್ಯಕ್ತಿ. ಇವರು ಪುಟ್ಟರಾಜು ಗವಾಯಿಗಳ ಪ್ರೀತಿಯ ಶಿಷ್ಯರಾಗಿದ್ದರು. ಸಂಗೀತವಲ್ಲದೆ ಸಾಹಿತ್ಯ ಜಗತ್ತಿನಲ್ಲಿ ತುಂಬಾ ಜ್ಞಾನ ಹೊಂದಿದ್ದ ವಿದ್ವಾಂಸರಾಗಿದ್ದರು. ಕನ್ನಡ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ, ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾಗಿ ಹಾಗೂ ರಾಜ್ಯ ಸಂಗೀತ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿ ನಾಡಿಗೆ ಸೇವೆ ಸಲ್ಲಿಸುವ ಮೂಲಕ ತಮ್ಮದೇ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಆಡಳಿತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಅಗಲಿದ ಆತ್ಮಕ್ಕೆ ಶಾಂತಿ ಕೋರಿ ಪ್ರಾರ್ಥಿಸಿದರು.

# ಜಿಲ್ಲಾ ಕಾರಾಗೃಹದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಕಾರಾಗೃಹದಲ್ಲಿ ಗುರುವಾರದಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ಕಾರಾಗೃಹ ಕೊಪ್ಪಳ ರವರ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದೇವೇಂದ್ರ ಪಂಡಿತ್, ಸರ್ಕಾರಿ ವಕೀಲರಾದ ಪ್ರದೀಪ್ ಕುಮಾರ ಹಾಗೂ ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ವಿಜಯಕುಮಾರ ಡಿ. ಚವ್ಹಾಣ ಅವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಹಾಗೂ ಜಿಲ್ಲಾ ಕಾರಾಗೃಹ ಸಿಬ್ಬಂದಿ ಉಪಸ್ಥಿತರಿದ್ದರು.

# ಸರ್ಕಾರ–ಜಿಲ್ಲಾಡಳಿತ ರೈತರ ಜೊತೆಗಿದೆ

## ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಹೇಳಿಕೆ | ರೈತರಿಗೆ ಸಾಂತ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಈ ಬಾರಿಯ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕಿದೆ. ಯಾರೂ ಆತಂಕ ಪಡಬಾರದು. ಸರ್ಕಾರ ಮತ್ತು ಜಿಲ್ಲಾಡಳಿತ ರೈತರ ಜತೆಗಿದೆ ಎಂದು ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಹೇಳಿದರು.

ಜಿಲ್ಲೆಯ ಸಿರುಗುಪ್ಪ ತಾಲ್ಲೂಕು ವ್ಯಾಪ್ತಿಯ ರಾರಾವಿ, ಅಗಸನೂರು, ಬೊಮ್ಮಲಾಪುರ, ಕೊತ್ತಲಚಿಂತೆ, ಮಿಟ್ಟೆ ಸುಗೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶುಕ್ರವಾರ ಬರ ಪರಿಸ್ಥಿತಿ ಅವಲೋಕನೆ ಮಾಡಿ, ರೈತರಿಗೆ ಸಾಂತ್ವನ ಹೇಳಿದರು.

ರಾರಾವಿ ಗ್ರಾಮದ ರೈತ ಮಂಜಪ್ಪನ ಹತ್ತಿ ಹೊಲ, ಕೊರವರ ಮಾರೆಪ್ಪನ ಮೆಣಸಿನಕಾಯಿ ಹೊಲಕ್ಕೆ ಭೇಟಿ ನೀಡಿ, ಬೆಳೆ ಪರೀಕ್ಷಿಸಿದರು. ಅದೇ ರೀತಿಯಾಗಿ ಅಗಸನೂರು ಗ್ರಾಮದ ರೈತ ಹುಸೇನಿಯ ಮೆಣಸಿನಕಾಯಿ ಬೆಳೆ, ಮಿಟ್ಟೆ ಸುಗೂರಿನ ಹನುಮಂತ, ಬೊಮ್ಮಲಾಪುರ ಗ್ರಾಮದ ಮಣಿಯಪ್ಪ ರೈತರ ಮೆಣಸಿನಕಾಯಿ ಬೆಳೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೈತರು ಯಾರೂ ಧೃತಿಗೆಡಬಾರದು, ಸಮೀಕ್ಷೆ ಅನುಸಾರ ಬರ ಪರಿಹಾರ ಒದಗಿಸಲು ರಾಜ್ಯ ಸರ್ಕಾರವು ರೈತರ ಬೆನ್ನೆಲುಬಾಗಿ ನಿಂತಿದೆ. ಯಾರೂ ಆತಂಕ ಪಡಬಾರದು ಎಂದು ಸಚಿವ ಬಿ.ನಾಗೇಂದ್ರ ಅವರು ರೈತರಿಗೆ ಮನವರಿಕೆ ಮಾಡಿದರು.



"ಸಿರುಗುಪ್ಪ ತಾಲ್ಲೂಕು ಭಾಗದ ಐದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 2,300 ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನ ಕಾಯಿ, ಹತ್ತಿ ಬೆಳೆ ಬಿತ್ತನೆ ಮಾಡಿದ್ದಾರೆ. ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಬೆಳೆ ಒಣಗಿದೆ, ಅಲ್ಲಲ್ಲಿ ಬೆಳೆ ರೋಗ ಅಂಟಿದೆ. ಈಗಾಗಲೇ ಎನ್.ಡಿ.ಆರ್.ಎಫ್ ತಂಡವು ಭೇಟಿ ನೀಡಿದ್ದು, ಸಮೀಕ್ಷೆ ನಡೆಸಿದ್ದಾರೆ" ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ಸಚಿವರಿಗೆ ಗಮನಕ್ಕೆ ತಂದರು.

ಇದೇ ಸಂದರ್ಭದಲ್ಲಿ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು, ಅಲ್ಲಿನ ನಾಗರಿಕರ ಜೊತೆ ಕುಶಲೋಪರಿ ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ವಿಚಾರಿಸಿದರು. ಕುಡಿಯುವ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡಿಕೊಡಬೇಕು ಎಂದು ಜಿಪಂ ಸಿಇಒ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಿರುಗುಪ್ಪ ತಾಲ್ಲೂಕು ತಹಶೀಲ್ದಾರ ವಿಶ್ವನಾಥ, ತಾಪಂ ಇಒ ಪವನ್ ಕುಮಾರ್, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರು ಹಾಜರಿದ್ದರು.

### ಬರ ಅಧ್ಯಯನ ಅಧಿಕಾರಿಗಳೊಂದಿಗೆ ಸಭೆ

ಮುಖ್ಯ ಮಂತ್ರಿಗಳ ನಿರ್ದೇಶನದಂತೆ, ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಅವಲೋಕಿಸಿ, ಇದೇ ತಿಂಗಳ ನ.15 ರೊಳಗಾಗಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಸಚಿವ ಬಿ.ನಾಗೇಂದ್ರ ಅವರು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಹೇಳಿದರು.

ಶುಕ್ರವಾರ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಸಮಸ್ಯೆ ಎದುರಾದಲ್ಲಿ ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು. ಜಾನುವಾರುಗಳಿಗೆ ಮೇವಿನ ದಾಸ್ತಾನು ಸಂಗ್ರಹಣೆ ಇಟ್ಟುಕೊಳ್ಳಬೇಕು ಎಂದು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು. ಬರ ನಿರ್ವಹಣೆಯನ್ನು ಕೈಗೊಳ್ಳಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರವು ಬರ ಎದುರಿಸಲು ಸನ್ನದ್ಧವಾಗಿದೆ ಎಂದರು.

### ಬೆಳೆಗೆ ಪರಿಹಾರ ನಿಗದಿ

ಜಿಲ್ಲೆಯಲ್ಲಿ 4,43,000 ಹೆಕ್ಟೇರ್ ಭೂಮಿ ಸಾಗುವಳಿ ಕ್ಷೇತ್ರವಾಗಿದ್ದು, ಈ ವರ್ಷದ ಮಂಗಾರು ಮಳೆ ಅಭಾವದಿಂದ ಕೇವಲ 2,78,227 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ 573 ಮಿ.ಮೀ ವಾಡಿಕೆ ಮಳೆಯಾಗಿದ್ದು, ಕೇವಲ 261 ಮೀ.ಮೀ ಪ್ರಮಾಣದಷ್ಟು ಮಳೆಯಾಗಿದೆ. ಜಿಲ್ಲೆಗೆ ಈಗಾಗಲೇ ಕೇಂದ್ರ ಬರ ಅಧ್ಯಯನ ತಂಡವು ಸಮೀಕ್ಷೆ ನಡೆಸಿದೆ. ಎನ್.ಡಿ.ಆರ್.ಎಫ್ ಮಾರ್ಗಸೂಚಿ ಅನ್ವಯದಂತೆ 1 ಹೆಕ್ಟೇರ್ ಪ್ರದೇಶದ ಖುಷ್ಕಿ ಬೆಳೆಗೆ ರೂ.8,500 ಪರಿಹಾರ, 1 ಹೆಕ್ಟೇರ್ ಪ್ರದೇಶದ ನೀರಾವರಿ ಬೆಳೆಗೆ ರೂ.17,000 ಪರಿಹಾರ, 1 ಹೆಕ್ಟೇರ್ ಪ್ರದೇಶದ ಬಹುವಾರ್ಷಿಕ ಬೆಳೆಗೆ ರೂ. 22,000 (ತೋಟಗಾರಿಕೆ ಬೆಳೆಗಳಿಗೆ) ಪರಿಹಾರ ನಿಗದಿಪಡಿಸಿದೆ ಎಂದು ಸುದ್ದಿಗೋಷ್ಠಿಯಲ್ಲಿ ಸಚಿವ ನಾಗೇಂದ್ರ ವಿವರಿಸಿದರು.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE! hampitimes epaper save your mobile space !
SCAN QR CODE TO JOIN FOLLOW HAMPI TIMES whatsapp channel

freshies fruit Ice Creams



FRESH AND NATURAL INGREDIENTS
NO CHEMICAL / COLOURS
Beside Medinova Hospital, ISR ROAD, Hosapete-583201
7036030603

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

सत्यमेव जयते GOVERNMENT OF INDIA MINISTRY OF SKILL DEVELOPMENT & ENTREPRENEURSHIP | N·S·D·C National Skill Development Corporation Transforming the skill landscape | PMKVY प्रधानमंत्री कौशल विकास योजना
PM SHRI KENDRIYA VIDYALAYA HOSAPETE
Skill Hubs under Skill Initiative (SHI)
DOMESTIC DATA ENTRY OPERATOR COURSE
FOR DROP OUT STUDENTS
VENU:PM SHRI KENDRIYA VIDYALAYA
TUNGABHADRA DAM, HOSAPETE-583225
TIME:2:45PM TO 5:00 PM
FEE:NIL(FREE OF COST)
AGE:15 TO 45 YEARS
Min Qualification: Drop out Students
Last date of Registration:20.11.2023
IF YOU HAVE MISSED SCHOOLS DUE TO SOME REASONS,NOW IS THE CHANCE TO ATTEND A SKILL BASED DOMESTIC DATA ENTRY COURSE,WHICH CAN HELP YOU IN SETTING UP A NEW PROFESSION AND EARN YOUR LIVELIHOOD.
*This course is only for those who have passed 10th and dropped out, please do not contact for registration whose Studying is going on in any school or college.
CONTACT:9901215728 E-mail id : kvhosapete@gmail.com

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA